ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ಜಿಲ್ಲಾ ಪಂಚಾಯತ್ ರಸ್ತೆಗಳ ಅಭಿವೃದ್ಧಿಯಲ್ಲಿನ ತಾರತಮ್ಯ

164 (531) ಶ್ರೀ ನಾಗರಾಜು ಎಂ.ಟಿ.ಬಿ. (ಹೊಸಕೋಟೆ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಎಷ್ಟು ಕಿ.ಮೀ ಉದ್ದದ ಜಿಲ್ಲಾ ಪಂಚಾಯತ್ ರಸ್ತೆಗಳಿವೆ ;

(ಆ) ಈ ರಸ್ತೆಗಳ ಪೈಕಿ ಹೊಸಕೋಟೆ ತಾಲ್ಲೂಕಿನ ರಸ್ತೆಗಳು ಹಾಳಾಗಿ ಸಂಚಾರಕ್ಕೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಇಚ್ಛೆ ಸರ್ಕಾರ ಹೊಂದಿದೆಯೇ;

(ಈ) ಇಚ್ಛೆ ಇದ್ದಲ್ಲಿ ಯಾವ ಅನುದಾನದಿಂದ ಅಭಿವೃದ್ಧಿಪಡಿಸಲಾಗುವುದು ;

(ಉ) ಇದಕ್ಕೆ ಕಾಲ ನಿಗದಿಪಡಿಸಲಾಗಿದೆಯೇ ;

(ಊ) ಜಿಲ್ಲಾ ಪಂಚಾಯತ್ ರಸ್ತೆಗಳ ದುರಸ್ತಿ ಅಭಿವೃದ್ಧಿಯಲ್ಲಿ ತಾರತಮ್ಯ ಮಾಡುವ ಮೂಲಕ ಒಂದೊಂದು ತಾಲ್ಲೂಕಿಗೆ ಒಂದೊಂದು ರೀತಿಯಲ್ಲಿ ಹೆಚ್ಚಿಗೆ ಅನುದಾನ ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಋ) ಈ ರೀತಿ ಅನುದಾನ ಬಿಡುಗಡೆ ಮಾಡಲು ಕಾರಣಗಳೇನು ?

ಶ್ರೀ ಸಿ.ಎಂ. ಉದಾಸಿ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ಪ್ರತಿ ತಾಲ್ಲೂಕಿನಲ್ಲಿರುವ ಜಿಲ್ಲಾ ಪಂಚಾಯತ್ ರಸ್ತೆಗಳ ಉದ್ದಗಳ ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ.	ತಾಲ್ಲೂಕಿನ ಹೆಸರು	ಜಿಲ್ಲಾ ಪಂಚಾಯತ್ ರಸ್ತೆಗಳ ಉದ್ದ ಕಿ.ಮೀ.ಗಳಲ್ಲಿ
1.	ದೇವನಹಳ್ಳಿ	578.83
2.	ದೊಡ್ಡಬಳ್ಳಾಪುರ	641.80
3.	ನೆಲಮಂಗಲ	466.60
4.	ಹೊಸಕೋಟೆ	714.90
5.	ರಾಮನಗರಂ	457.25
6.	ಚನ್ನಪಟ್ಟಣ	380.05
7.	ಕನಕಪುರ	725.05
8.	ಮಾಗಡಿ	636.40
	ಬೆಂಗಳೂರು ಗ್ರಾಮಾಂತರ ಜಿಲ್ಲೆ ಒಟ್ಟು	4600.88

(ಆ) ಹೌದು.

(ಇ) ಹೊಂದಿದೆ.

(ಈ) ಪ್ರಸ್ತುತ ಸಾಲಿನಲ್ಲಿ ಹೊಸಕೋಟೆ ತಾ: ನ ವ್ಯಾಪ್ತಿಯಲ್ಲಿ ಹಾಳಾಗಿರುವ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ, 5054 ಯೋಜನೆ, 12ನೇ ಹಣಕಾಸು ಯೋಜನೆ, ನಬಾರ್ಡ್ ಯೋಜನೆಯಡಿಯಲ್ಲಿ ಅನುದಾನ ಒದಗಿಸಲಾಗಿದೆ.

ಕ್ರ.ಸಂ.	ಯೋಜನೆಗಳು	ಅನುದಾನ (ರೂ. ಲಕ್ಷಗಳಲ್ಲಿ)
1.	ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ (3054)	43.26
2.	5054 ಗ್ರಾಮೀಣ ಸಂಪರ್ಕ ಹಾಗೂ ಹೊಸ ಸೇತುವೆಗಳ ನಿರ್ಮಾಣ	12.08
3.	12ನೇ ಹಣಕಾಸು ಯೋಜನೆ	88.10
4.	ನಬಾರ್ಡ್ ಆರ್‌ಐಡಿಎಫ್ 10	12.00
	ಒಟ್ಟು	155.44

(ಉ) ಅನುದಾನ ಲಭ್ಯತೆಯ ಮೇರೆಗೆ ಆದ್ಯತೆಯ ಮೇಲೆ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುತ್ತದೆ.

(ಊ) ಮತ್ತು (ಋ) ಲೆಕ್ಕಶೀರ್ಷಿಕೆ 3054 ಮತ್ತು 5054 ರಡಿಯಲ್ಲಿ ಬಿಡುಗಡೆಯಾದ ಅನುದಾನವನ್ನು ಡಾ: ನಂಜುಂಡಪ್ಪರವರ ಪ್ರಾದೇಶಿಕ ಅಸಮತೋಲನ ನಿವಾರಣ ಉನ್ನತ ಅಧಿಕಾರದ ಸಮಿತಿಯ ವರದಿಯ ಶಿಫಾರಸ್ಸಿನಲ್ಲಿ ಸೂಚಿಸಲಾದ ಸೂಚ್ಯಾಂಕ ಆಧರಿಸಿ ಬಿಡುಗಡೆ ಮಾಡಲಾಗಿದೆ. 12ನೇ ಹಣಕಾಸು ಯೋಜನೆಯಡಿ ಅನುದಾನವನ್ನು 12ನೇ ಹಣಕಾಸು ಆಯೋಗ ಸೂಚಿಸಿರುವ ವೈಟೇಜ್ ಹಾಗೂ ರಸ್ತೆಯ ಉದ್ದಳತೆಯ ಆಧಾರದ ಮೇಲೆ ನಿಗದಿಪಡಿಸಲಾಗಿದೆ.

ಶ್ರೀ ಎಂ.ಟಿ.ಬಿ. ನಾಗರಾಜು: ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಎಷ್ಟು ಕಿ.ಮೀ. ಉದ್ದದ ಜಿಲ್ಲಾ ಪಂಚಾಯತ್ ರಸ್ತೆಗಳಿವೆ ಎನ್ನುವ ನನ್ನ ಪ್ರಶ್ನೆಗೆ 4,600 ಕಿ.ಮೀ. ರಸ್ತೆಗಳಿವೆ ಎಂದು ತಾವು ಉತ್ತರವನ್ನು ಕೊಟ್ಟಿದ್ದೀರಿ. ಹೊಸಕೋಟೆ ತಾಲ್ಲೂಕಿನಲ್ಲಿ 714 ಕಿ.ಮೀ. ರಸ್ತೆಗಳಿವೆ. ಹೊಸಕೋಟೆ ತಾಲ್ಲೂಕಿನ ಈ ರಸ್ತೆಗಳು ಹಾಳಾಗಿ ಸಂಚಾರಕ್ಕೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ, "ಹೌದು" ಎಂದು ತಾವು ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದೀರಿ. ಸಂಚಾರಕ್ಕೆ ಅನಾನುಕೂಲವಾಗಿರುವ ಆ ರಸ್ತೆಗಳನ್ನು ಸರಿಪಡಿಸಲಿಕ್ಕೆ ಸರ್ಕಾರದವರು ಹಣವನ್ನು ಬಿಡುಗಡೆ ಮಾಡಿದ್ದೀರಿ? ಆ ರಸ್ತೆಗಳನ್ನು ಸರಿಪಡಿಸಲಿಕ್ಕೆ ಪ್ರಾರಂಭ ಮಾಡಿರುವಿರಾ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಸಿ.ಎಂ. ಉದಾಸಿ: ಯಾವ ಅನುದಾನದಿಂದ ಈ ರಸ್ತೆಗಳನ್ನು ಅಭಿವೃದ್ಧಿಗೆ ಹಣವನ್ನು ಬಿಡುಗಡೆ ಮಾಡಲಾಗುವುದು ಎಂಬುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ (3054) 43 ಲಕ್ಷದ 26 ಸಾವಿರ ರೂ.ಗಳು, 5054ರಲ್ಲಿ ಗ್ರಾಮೀಣ ಸಂಪರ್ಕ ಹಾಗೂ ಹೊಸ ಸೇತುವೆಗಳ ನಿರ್ಮಾಣಕ್ಕೆ 12.08 ಲಕ್ಷ, 12ನೇ ಹಣಕಾಸು ಯೋಜನೆಯಲ್ಲಿ 88.10 ಲಕ್ಷ ರೂ.ಗಳು ಹಾಗೂ ನಬಾರ್ಡ್ ಆರ್.ಐ.ಡಿ.ಎಫ್. 10 ರಲ್ಲಿ 12 ಲಕ್ಷ ಹೀಗೆ ಒಟ್ಟು 1 ಕೋಟಿ 55 ಲಕ್ಷದ 44 ಸಾವಿರ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎನ್ನುವುದನ್ನು ಅವರಿಗೆ ಉತ್ತರದಲ್ಲೇ ಕೊಟ್ಟಿದ್ದೇವೆ. ಅದನ್ನು ಅವರು ಗಮನಿಸಬೇಕು ಎಂದು ಅವರಿಗೆ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಎಂ.ಟಿ.ಬಿ. ನಾಗರಾಜು: 2005–06ನೇ ಸಾಲಿನಲ್ಲಿ 3054 ಲೆಕ್ಕ ಶೀರ್ಷಿಕೆಯಡಿಯಲ್ಲಿ ಮುಖ್ಯಮಂತ್ರಿಗಳ ಅನುದಾನದಲ್ಲಿ ವಿಶೇಷ ಅನುದಾನ ಎಂದು ಸುಮಾರು 28 ಕೋಟಿ ರೂ.ಗಳನ್ನು ಈ ರಾಜ್ಯಕ್ಕೆ ಕೊಟ್ಟಿದ್ದಾರೆ. ಅದರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರಕ್ಕೆ 50 ಲಕ್ಷ ರೂ, ದೇವನಹಳ್ಳಿಗೆ 30 ಲಕ್ಷ ರೂ, ಮಾಗಡಿಗೆ 25 ಲಕ್ಷ ರೂ ಹಣವನ್ನು ಕೊಟ್ಟಿದ್ದಾರೆ. ಹೊಸಕೋಟೆ ತಾಲ್ಲೂಕಿಗೆ ಹಣ ಕೊಟ್ಟಿಲ್ಲ. ಅ ಕಡೆ ಸಾತನೂರು ಕ್ಷೇತ್ರಕ್ಕೆ ಕೊಟ್ಟಿಲ್ಲ. ಚನ್ನಪಟ್ಟಣದ ಭಾಗದಲ್ಲಿ ಕೊಟ್ಟಿಲ್ಲ. ಎಲ್ಲಿ ಕಾಂಗ್ರೆಸ್ ಶಾಸಕರಿದ್ದಾರೆ, ಆ ತಾಲ್ಲೂಕುಗಳಿಗೆ 3054 Head ನಲ್ಲಿ ಹಣ ಬಿಡುಗಡೆ ಮಾಡಿಲ್ಲ. ಈ ಬಗ್ಗೆ ಉತ್ತರವನ್ನು ಸರ್ಕಾರದ ಕಡೆಯಿಂದ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಈ 30 ಕೋಟಿ ರೂಪಾಯಿಗಳ lumpsum grant ಅನ್ನು ವಿತರಣೆ ಮಾಡಬೇಕಾದಂಥ ಸಂದರ್ಭದಲ್ಲಿ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಎಲ್ಲಿ ಬೇಕಾಗುತ್ತದೋ ಅಲ್ಲಿಗೆ ಹಣವನ್ನು ಬಿಡುಗಡೆ ಮಾಡುವ ಕೆಲಸವನ್ನು ಮಾಡಿದೆ. ಕಾಂಗ್ರೆಸ್‌ನ ಶಾಸಕರು ಇರುವ ಕಡೆಗೆ ಹಣ ಬಿಡುಗಡೆ ಮಾಡಿಲ್ಲವೆನ್ನುವ ಮಾತನ್ನು ಅವರು ಹೇಳಿದರು. ಅನೇಕ ಜನ ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೂ ಸಹ ಬಿಡುಗಡೆ ಮಾಡಿದ್ದೇವೆ. ಇದರ ಬಗ್ಗೆ ಈಗಾಗಲೇ ಚರ್ಚೆಯಾಗಿದೆ. ಅದನ್ನೂ ಸಹ ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

(ಅಡಚಣೆ)

ಅಧ್ಯಕ್ಷರು: ಆಯಿತು, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು. (ಅಡಚಣೆ) ಎಲ್ಲರೂ ಎದ್ದುನಿಂತುಕೊಂಡು ಮಾತನಾಡಿದರೆ ಹೇಗೆ? ಕುಳಿತುಕೊಳ್ಳಿ. ಈ ತರಹ behave ಮಾಡುವುದು ಸರಿಯಲ್ಲ. ಇತ್ತೀಚೆಗೆ ಯಾಕೋ ಸರಿಯಾಗುತ್ತಿಲ್ಲ. ಈ ತರಹ ಎಲ್ಲರೂ ನಿಂತುಕೊಂಡರೆ ಹೇಗೆ? ಮಾತನಾಡಿ ಮಾನ್ಯ

ದೇಶಪಾಂಡೆಯವರೆ, ಬೇರೆ ಯಾರೂ ಮಾತನಾಡಬೇಡಿ. ಅವರು ಬಂದಾಗ ಅವರು ಮಾಡುತ್ತಾರೆ. ಇವರು ಬಂದಾಗ ಇವರು ಮಾಡುತ್ತಾರೆ. ಪ್ರಜಾಪ್ರಭುತ್ವದಲ್ಲಿ ಹೀಗೆಯೇ ಎಂದು ಎಲ್ಲಾ ಕಡೆಯಲ್ಲಿ ಬೋರ್ಡ್ ಹಾಕಿಬಿಡಿ.

(ಅಡಚಣೆ)

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ): ಮಾನ್ಯ ಅಧ್ಯಕ್ಷರೆ, ಒಂದು ವಿಚಾರವನ್ನು ಮಾನ್ಯ ಸಚಿವರು ಹೇಳಿದರು. ಇದೇ ಸದನದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು, ನಮ್ಮ ಹಲವಾರು ಸ್ನೇಹಿತರು ಮುಖ್ಯಮಂತ್ರಿಗಳ ರಸ್ತೆ ನಿಧಿಯಲ್ಲಿ ಬಹುತೇಕ ಕಾಂಗ್ರೆಸ್ ಶಾಸಕರಿಗೆ ಕೊಟ್ಟಿಲ್ಲ. ಸ್ವಲ್ಪ ಜನರಿಗೆ ಮಾತ್ರ ಕೊಟ್ಟಿರುವುದನ್ನು ನಾನು ಒಪ್ಪುತ್ತೇನೆ. ಹಿಂದೆ ಇದೇ ಚರ್ಚೆ ಆದಾಗ, ಇದನ್ನು ಸರಿಪಡಿಸುತ್ತೇನೆ ಮತ್ತು ಯಾವ ಕ್ಷೇತ್ರಕ್ಕೆ ಹಣ ಬಿಡುಗಡೆಯಾಗಿಲ್ಲ ಅದನ್ನು ತಕ್ಷಣ ಬಿಡುಗಡೆ ಮಾಡುತ್ತೇವೆಂದು ಹೇಳಿದರು. ಇನ್ನೂ ಕೂಡ ನಿಮ್ಮ ಭರವಸೆಯನ್ನು ನೀವು ಅನುಷ್ಠಾನದಲ್ಲಿ ತಂದಿಲ್ಲ. ಮುಖ್ಯಮಂತ್ರಿಗಳ ರಸ್ತೆ ನಿಧಿಯಿಂದ ಹಣ ಕೊಡುತ್ತೀರೆಂದು ನೀವು ಹೇಳಿದಿರಿ. ಆದರೆ, ಮುಖ್ಯಮಂತ್ರಿಗಳ ರಸ್ತೆ ನಿಧಿಯಲ್ಲಿ ಹಣವಿಲ್ಲವೆಂದು ನಿನ್ನೆ ನಾನು ತಿಳಿದುಕೊಂಡೆ. ನಿಮಗೊಂದು ಚೀಟಿಯನ್ನು ನಾನು ಈಗ ಕಳುಹಿಸಿದೆ. ನಿಮ್ಮ ಭರವಸೆ ಏನಿದೆ ಅದನ್ನು ಯಾವ ಪ್ರಕಾರ ನೀವು ಅನುಷ್ಠಾನದಲ್ಲಿ ತರಲಿಕ್ಕೆ ಸಾಧ್ಯವಿದೆ? ನೀವು ಮಾತು ಕೊಟ್ಟಿದ್ದೀರಿ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಎಸ್.ವೈ. ಗೋಪಾಲಕೃಷ್ಣರವರು) ಅಧ್ಯಕ್ಷರ ಪೀಠವನ್ನಲಂಕರಿಸಿದರು)

ನೀವು ಮಾತು ಕೊಟ್ಟಿದ್ದೀರಿ. ಕ್ಷೇತ್ರಕ್ಕೆ ಅನ್ಯಾಯವಾಗಿದೆ. ಇವತ್ತು ನಾನು ಹಳಿಯಾಳ constituency ನಿಂದ ಪ್ರತಿನಿಧಿಸುತ್ತಿರಬಹುದು. ಮುಂದೆ ಇನ್ಯಾರೋ ಮಾಡ್ತಾರೆ. ವ್ಯಕ್ತಿಗಿಂತ ಆ constituency ಅಭಿವೃದ್ಧಿ ಬಹಳ important. ಹಾಗಾಗಿ ಯಾವಾಗಲೂ ಅಭಿವೃದ್ಧಿಯಾಗಬೇಕಾದರೆ ಅದು balance ಆಗಿ ಸರ್ಕಾರ ಹೋಗಬೇಕು. ಒಂದೊಂದು ಸಲ ಹೆಚ್ಚುಕಡಿಮೆಯಾಗುತ್ತದೆ. ಇಲ್ಲ ಎಂದು ಹೇಳುವುದಿಲ್ಲ. ಒಬ್ಬೊಬ್ಬರಿಗೆ 5 ಲಕ್ಷ ರೂ ಹೆಚ್ಚು ಕೊಡುತ್ತೀರಿ, 5 ಲಕ್ಷ ರೂ ಕಡಿಮೆ ಮಾಡುತ್ತೀರಿ. That discretion is okay. ಆದರೆ ಏನೂ ಕೊಡುವುದಿಲ್ಲ ಎಂದು ಹೇಳಿದಾಗ ಏನು ಸಕೆ ಮಾಡಬೇಕು? ನಿಮಗೆ ರಾಜ್ಯದ ಎಲ್ಲಾ ಕ್ಷೇತ್ರಗಳು ಸರ್ವಾಂಗೀಣ ಅಭಿವೃದ್ಧಿಯಾಗುವುದಕ್ಕೆ ಇಷ್ಟವಿಲ್ಲವೇ? ಹಾಗಾಗಿ ತಾವು ನಮಗೆ ಭರವಸೆ ಕೊಟ್ಟಿದ್ದು ಸತ್ಯವಿದೆ. ನಿಮ್ಮ ಮೇಲೆ ವಿಶ್ವಾಸವಿದೆ. ನನಗೆ ಈಗ ಹೇಳಬೇಕು. ಈ ಹಣವನ್ನು ಹೇಗೆ ಬಿಡುಗಡೆ ಮಾಡುತ್ತೀರಿ, ಹಣ ಯಾವಾಗ ಕೊಡುತ್ತೀರಿ ಎನ್ನುವುದನ್ನು ಹೇಳಬೇಕು.

ಶ್ರೀ ಎಂ.ಟಿ.ಬಿ. ನಾಗರಾಜು: ಸರ್ವಶಿಕ್ಷಣ ಅಭಿಯಾನದಲ್ಲಿ ಗ್ರಾಮಾಂತರ ಜಿಲ್ಲೆಯಲ್ಲಿ ರಾಮನಗರಕ್ಕೆ 50 ಕೊಠಡಿಗಳನ್ನು ಕೊಟ್ಟಿದ್ದಾರೆ, ದೇವನಹಳ್ಳಿಗೆ 30

ಕೊಠಡಿಗಳನ್ನು ಕೊಟ್ಟಿದ್ದಾರೆ ಮಾಗಡಿಗೆ 25 ಕೊಠಡಿಗಳನ್ನು ಕೊಟ್ಟಿದ್ದಾರೆ. ನಮ್ಮ ಹೊಸಕೋಟೆ ತಾಲ್ಲೂಕಿಗೆ ಕೇವಲ 15 ಕೊಠಡಿಗಳನ್ನು ಮಾತ್ರ ಕೊಟ್ಟಿದ್ದಾರೆ. ಅದರಲ್ಲೂ ಕೂಡ ರಾಜಕೀಯ, ತಾರತಮ್ಯ ಮಾಡಿದ್ದಾರೆ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಉಪಾಧ್ಯಕ್ಷರೆ, ಮಾಜಿ ಸಚಿವರಾದ ಶ್ರೀ ದೇಶಪಾಂಡೆಯವರು ಪ್ರಸ್ತಾಪ ಮಾಡಿರುವಂಥ ವಿಚಾರಕ್ಕೆ ಈ ಮೊದಲು ಸದನದಲ್ಲಿ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ನಾವು ಹೇಳಿದ ಹಾಗೆ ಹಣ ಬಿಡುಗಡೆಯಾಗಬೇಕಾಗಿತ್ತು, ಆದರೆ ಆಗಲಿಲ್ಲವೆನ್ನುವ ಮಾತನ್ನು ಅವರು ಹೇಳಿದ್ದಾರೆ. ಅದಕ್ಕೆ ವಿಶೇಷವಾದ ಅನುದಾನವನ್ನು ಪಡೆಯುವ ಕೆಲಸ ನಡೆದಿದೆ. 50 ಕೋಟಿ ರೂಪಾಯಿಗಳ ಸಲುವಾಗಿ ನಾವು ಬೇಡಿಕೆಯನ್ನು ಸಲ್ಲಿಸಿದ್ದೇವೆ. ಅದು ಬಂದ ಮೇಲೆ ಉಳಿದ ಶಾಸಕರಿಗೂ ಕೊಡಬೇಕಾದ ಕೆಲಸವನ್ನು, ಅನ್ಯಾಯವಾಗಿದ್ದರೆ ಸರಿಪಡಿಸುವಂಥ ಕೆಲಸವನ್ನು ಆದಷ್ಟು ಬೇಗ ಮಾಡುತ್ತೇನೆ. ಇದು ಮೂರು ತಿಂಗಳ ಹಿಂದೆ ಚರ್ಚೆಯಾಗಿದೆ. ಅತಿ ಶೀಘ್ರದಲ್ಲಿ ಮಾಡಿಸುತ್ತೇವೆ. ಇನ್ನೊಂದು ಸರ್ವಶಿಕ್ಷಣ ಅಭಿಯಾನಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದರು. ಅದು ಶಿಕ್ಷಣ ಇಲಾಖೆಗೆ ಸಂಬಂಧಿಸಿದಂಥದ್ದು. ಅದಕ್ಕೆ ಸಂಬಂಧಿಸದ ಪ್ರಶ್ನೆಗಳನ್ನು ಪ್ರತ್ಯೇಕವಾಗಿ ಏನಾದರೂ ಕೇಳಿದರೆ ಸಂಬಂಧಪಟ್ಟ ಸನ್ಮಾನ್ಯ ಸಚಿವರು ಉತ್ತರಿಸುತ್ತಾರೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಉದಾಸಿಯವರೇ, ಶ್ರೀ ನಾಗರಾಜ್‌ರವರು ಪ್ರಥಮ ಬಾರಿಗೆ ಆರಿಸಿ ಬಂದಿದ್ದಾರೆ ಮತ್ತ ಬಹಳಷ್ಟು ಸದಸ್ಯರು ಎದ್ದುನಿಂತು ಕೇಳಿದ್ದಾರೆ. ಅವರು, ಶ್ರೀ ಕೃಷ್ಣಬೈರೇಗೌಡರು ಇದ್ದಾರೆ, ಬೇರೆ ಬೇರೆ ಶಾಸಕರೂ ಕೂಡ ತಮ್ಮ ಮತಕ್ಷೇತ್ರಕ್ಕೆ ಅನ್ಯಾಯವಾಗಿದೆ ಎನ್ನುವ ರೀತಿಯಲ್ಲಿ ಎದ್ದು ನಿಂತು ಹೇಳಿದರು. ಶ್ರೀ ದೇಶಪಾಂಡೆಯವರೂ ಸಹ ಹೇಳಿದ್ದಾರೆ. ಕಳೆದ ಸದನದಲ್ಲಿ ಶ್ರೀ ರಾಯರೆಡ್ಡಿಯವರು ಸೇರಿದಂತೆ ಇತರೆ ಶಾಸಕರೂ ಕೂಡ ತಮ್ಮನ್ನು ಕೇಳಿದ್ದಾರೆ. ಇವತ್ತು ತಾರತಮ್ಯವೇಕೆ? ರಸ್ತೆ ಅಭಿವೃದ್ಧಿಗೆಂದು ಬಿ.ಜೆ.ಪಿ., ಕಾಂಗ್ರೆಸ್ ಎಂದು ಬೋರ್ಡ್‌ನಲ್ಲಿ ಬರೆದುಕೊಡುವುದಿಲ್ಲ. ಆ ಕ್ಷೇತ್ರದಲ್ಲಿರುವ ಎಲ್ಲಾ ಕಡೆಗೆ ಅಭಿವೃದ್ಧಿಯಾಗಬೇಕು. ನಾನು ಕೂಡ ಲೋಕೋಪಯೋಗಿ ಇಲಾಖೆಯ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಏಕೆ ಒತ್ತಡದಲ್ಲಿ ಕೆಲಸ ಮಾಡುತ್ತಿದ್ದೀರಿ? You are answerable to this House. ನೀವು ಜನರಿಗೆ ಕೂಡ ಉತ್ತರ ಕೊಡತಕ್ಕಂಥವರು. ನಾಳೆ ಜನರು ಕೇಳುತ್ತಾರೆ. ಈ ತರಹದ ಒಂದು ವ್ಯವಸ್ಥೆಯನ್ನು ನೀವು ಮಾಡುತ್ತಾ ಹೋದರೆ, ನಿಮಗೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಯಾವ್ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂಬುದನ್ನು ಸದನದ ಮುಂದಿಡಬೇಕು. ಒಂದು ಕಡೆಗೆ 50 ಕೋಟಿ ರೂ, ಇನ್ನೊಂದು ಕಡೆಗೆ 30 ಕೋಟಿ ರೂ, ಆ ರೀತಿಯಾಗಿ ಕೊಟ್ಟು

ಮತ್ತೊಂದು ಕಡೆಗೆ ಏನೂ ಕೊಡಲಿಲ್ಲ. ನಮ್ಮ ಕಡೆಯ ಗುಲ್ಬರ್ಗಾ ಜಿಲ್ಲೆಗೆ ಏನು ಮಾಡಿದ್ದೀರೆಂದು ನಾನು ಕೇಳುತ್ತಿಲ್ಲ. ಸಮಯ ಬಂದಾಗ ಕೇಳುತ್ತೇವೆ ಮತ್ತು ಹೊರಗಡೆ ಹೇಳುತ್ತೇವೆ. ಆದರೆ ಈ ತರಹದ ತಾರತಮ್ಯ ತಾವು ಮಾಡುವುದು ಸರಿಯಲ್ಲ. ಇದನ್ನು ತಾವು ಸರಿಪಡಿಸಬೇಕು ಮತ್ತು ಒಳ್ಳೆಯ ಆಡಳಿತ ಕೊಡುವ ರೀತಿಯಲ್ಲಿ ಕೆಲಸ ಮಾಡಬೇಕು. ನಿಮಗೆ ಬದ್ದತೆ ಅಲ್ಲ ಎನ್ನುವ ಮಾತನ್ನು ಕೂಡ ಹೇಳುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಉಪಾಧ್ಯಕ್ಷರೆ, ವಿವರವಾಗಿ ಚರ್ಚೆಗೆ ಹೋಗುವುದು ಸೂಕ್ತವಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಹಿಂದೆ ನಡೆದಿರುವಂಥದ್ದನ್ನು, ನಬಾರ್ಡ್‌ನಲ್ಲಿ ಹಣ ವಿತರಣೆ ಮಾಡಬೇಕಾದಾಗ ವಿಧಾನಸಭಾ ಕ್ಷೇತ್ರವಾರು ವಿಂಗಡನೆ ಮಾಡಬೇಕಾದಾಗ ಇರುವಂಥ ನಡವಳಿಕೆಗಳನ್ನು, ರಸ್ತೆಗಳಿಗೆ ಹಣ ಬಿಡುಗಡೆಯಾಗಿದ್ದನ್ನಾಗಲಿ, ಸಣ್ಣ ನೀರಾವರಿ ಇಲಾಖೆಯಲ್ಲಿ ಹಣ ಬಿಡುಗಡೆ ಮಾಡಿರುವಂಥ ವಿಚಾರಕ್ಕಾಗಲಿ, ಚರ್ಚೆಗೆ ಹೋಗಬೇಕಾಗಿದ್ದು ಹಿಂದೆ ಆಗಿರುವಂಥ ಅನ್ಯಾಯಗಳ ಬಗ್ಗೆ ನಾವು ಚರ್ಚೆ ಮಾಡುವುದು ಸರಿಯಲ್ಲವೆನ್ನುವುದನ್ನು ಆ 30 ಕೋಟಿ ರೂಪಾಯಿಗಳನ್ನು ವಿತರಣೆ ಮಾಡಬೇಕಾದಂಥ ಸಂದರ್ಭದಲ್ಲಿ, ಚರ್ಚೆ ಮಾಡಿ ನಾವು ಅಲ್ಲಿಗೆ ಕೈಬಿಡಬೇಕಾದಂಥ ಕೆಲಸವನ್ನು ಮಾಡಿದ್ದೆವು. ನ್ಯಾಯಸಮ್ಮತವಾಗಿ ತಮಗೂ ದೊರೆಯಬೇಕಾಗಿದ್ದ, ತಾವೇನೂ ಕೇಳಿದ ಹಣವನ್ನು ಹಿಂದಿನ ಸಂಪ್ರದಾಯವನ್ನೇ ನಾವು ಮುಂದುವರೆಸಿಕೊಂಡು ಹೋಗಬೇಕಾಗಿರುವುದು ಅವಶ್ಯವಿಲ್ಲ ಎನ್ನುವ ಭಾವನೆಯನ್ನು ಸಹಿತ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದೇನೆ. ಈಗ ತಮಗೆ ನ್ಯಾಯ ದೊರಕಿಸಿಕೊಡಬೇಕು, ಹೊಸ ಶಾಸಕರು ಕೆಲವರಿದ್ದಾರೆ, ಅವರಿಗೆ ಅನ್ಯಾಯವಾಗಿದೆ ಎನ್ನುವ ಮಾತಿದೆ, ಕೆಲವರಿಗೆ ಇನ್ನೂ ದೇಶಪಾಂಡೆಯಂಥವರಿಗೆ ಕೆಲವರಿಗೆ ಹಣ ಬಂದಿಲ್ಲವೆನ್ನುವ ಮಾತೇನಿದೆ, ತಮ್ಮೆಲ್ಲರ ಭಾವನೆಗಳನ್ನು ಗಮನದಲ್ಲಿಟ್ಟುಕೊಂಡು....

ಶ್ರೀ ಆರ್.ವಿ. ದೇಶಪಾಂಡೆ: ನಮಗೆ ಬರದಿದ್ದರೆ ಚಿಂತೆ ಇಲ್ಲ. ನಾವು ಸಾಕಷ್ಟು ಅಭಿವೃದ್ಧಿಯನ್ನು ನಮ್ಮ ಕ್ಷೇತ್ರದಲ್ಲಿ ಮಾಡಿದ್ದೇವೆ. ನಮ್ಮದೇನೂ ಎರಡು ವರ್ಷದಿಂದ ಹಣ ಬಂದಿಲ್ಲವೆಂದರೆ ನಮಗೆ ತೊಂದರೆ ಇಲ್ಲ. ನಿಮ್ಮ ಕ್ಷೇತ್ರ ನಮ್ಮ ಕ್ಷೇತ್ರದ ಪಕ್ಕದೇ ಆಗಿದೆ. ಹಾನಗಲ್‌ನಲ್ಲಿ ಊರಿನ ಜನ ಏನು ಮಾಡಿದಿರಿ ಎಂದು ನಿಮಗೂ ಕೇಳುತ್ತಾರೆ. ನನಗೆ ಉತ್ತರ ಕೊಡುವುದು ಬೇಡ. ಅವರಿಗೆ ನೀವು ಉತ್ತರ ಕೊಟ್ಟರೆ ಸಾಕು. I am not worried. (ಅಡಚಣೆ). Individual ಆಗಿ ನನ್ನ ಕ್ಷೇತ್ರದ ಬಗ್ಗೆ ನಾನು ವಾದ ಮಾಡುತ್ತಿಲ್ಲ. ಎಲ್ಲಾ ಶಾಸಕರ ಪರವಾಗಿ, ಎಲ್ಲೆಲ್ಲಿ ಅನ್ಯಾಯವಾಗಿದೆ ಅದನ್ನು ಸರಿಪಡಿಸಿ ಎಂದು ನಾನು ಮಾತನಾಡುತ್ತಿದ್ದೇನೆ. ನಿನ್ನೆ ನನಗೆ ಯಾರೋ ಒಬ್ಬರು ಹೇಳಿದರು, ಇವತ್ತು ಮುಖ್ಯಮಂತ್ರಿಗಳ ರಸ್ತೆ ಅಭಿವೃದ್ಧಿ ಫಂಡ್‌ನಲ್ಲಿ ಹಣವಿಲ್ಲ. ಏನಾದರೂ ಇವರು ಹಣ ಕೊಡಬೇಕಾದರೆ

Twelfth Finance Commission ನಿಂದ ಏನಾದರೂ ಸಹಾಯ ಮಾಡಲಿಕ್ಕೆ ಸಾಧ್ಯ. ಇಲ್ಲದಿದ್ದರೆ ಇಲ್ಲ ಎಂದು ಹೇಳಿದ್ದಾರೆ. ಅವರೆಲ್ಲರ ಪರವಾಗಿ ಎಲ್ಲೆಲ್ಲಿ ಯಾವ್ಯಾವ ಕ್ಷೇತ್ರಕ್ಕೆ ಅನ್ಯಾಯವಾಗಿದೆ ಸರಿಪಡಿಸಿ ಎಂದು ಹೇಳುತ್ತಿದ್ದೇನೆ.

(ಅಡಚಣೆ)

ಶ್ರೀ ಬಿ. ಶಿವರಾಮು: ಎಲ್ಲರಿಗೂ ಕೂಡ ವಿಶೇಷವಾಗಿ ನಿಮ್ಮ ಬಗ್ಗೆ ಗೌರವವಿದೆ. ನ್ಯಾಯಸಮ್ಮತವಾಗಿ ನಡೆದುಕೊಳ್ಳುತ್ತಾರೆನ್ನುವ ಅಭಿಪ್ರಾಯವಿದ್ದಾಗ, ಏಕೆ ಈ ರೀತಿ ನೀವು ಮಾಡಿ ಮತ್ತೆ ಬೇರೆ ರೀತಿ ನಾವು ನಡೆದುಕೊಳ್ಳುವಂಥ ವ್ಯವಸ್ಥೆ ಮಾಡುತ್ತೀರಿ?

(ಅಡಚಣೆ)

ಶ್ರೀ ಸಿ.ಎಂ. ಉದಾಸಿ: ಮಾನ್ಯ ಉಪಾಧ್ಯಕ್ಷರೆ, ಮುಖ್ಯಮಂತ್ರಿಗಳ ರಸ್ತೆ ಅಭಿವೃದ್ಧಿ ಯೋಜನೆಯಲ್ಲಿ 3054ರಲ್ಲಿ ಈಗಾಗಲೇ 88 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದನ್ನು, 80 ಕೋಟಿ 13 ಲಕ್ಷ ರೂಪಾಯಿಗಳನ್ನು ಈ ವರ್ಷ ವಿಧಾನಸಭಾ ಕ್ಷೇತ್ರಾವಾರು ಬಿಡುಗಡೆ ಮಾಡಿಯಾಗಿದೆ. ಅನುದಾನವನ್ನು ಹಂಚಲಾಗಿದೆ. ಆ ಪ್ರಶ್ನೆ ಬೇರೆ. 80 ಕೋಟಿ 13 ಲಕ್ಷ ಹಣ ಕ್ಷೇತ್ರವಾರು ಬಿಡುಗಡೆಯಾಗಿದ್ದನ್ನು ನಿಮಗೆ ಕಳುಹಿಸುತ್ತಿದೇನೆ. ಆದರೆ 30 ಕೋಟಿ ರೂಪಾಯಿಗಳನ್ನು ಕೊಟ್ಟಂಥ ಸಂದರ್ಭದಲ್ಲಿ ಕೆಲವರಿಗೆ ಅನ್ಯಾಯವಾಗಿದೆ ಎನ್ನುವ ಮಾತಿದೆ. ಆ ಸಂದರ್ಭದಲ್ಲಿ ಯಾವ ರೀತಿ ನಡವಳಿಕೆಯಾಗಿತ್ತು....

(ಅಡಚಣೆ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ಶ್ರೀ ಉದಾಸಿಯವರು ಈಗ ತೆಗೆದುಕೊಂಡಿರತಕ್ಕಂಥ ಒಂದು ನಿರ್ಣಯದ ಮೇಲೆ ಚರ್ಚೆಯಾಗುತ್ತಿದೆ. ಹಿಂದಿನ ಹಲವಾರು ವರ್ಷಗಳಲ್ಲಿ ಏನೇನಾಗಿದೆ ಎನ್ನುವುದನ್ನು ನೋಡೋಣ.

ಶ್ರೀ ಎಂ.ಪಿ. ವೆಂಕಟೇಶ್: ಮಾನ್ಯ ಸೋಮಶೇಖರ್‌ರವರು ಮೈಸೂರಿನಲ್ಲಿ ಅವರ ದರ್ಬಾರು ನಡೆಸಿದರು. ಈಗ ಹೇಳುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು: ವೆಂಕಟೇಶ್‌ರವರೇ, ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ): ಹೋದ ವರ್ಷ ಇದೇ ರೀತಿ ಘಟನೆಯಾಗಿ ಬಾವಿಗೆ ಬಂದು ಅಡ್ಜರ್ನ್ ಮಾಡಿ ಕೊನೆಗೆ Speaker chamber ನಲ್ಲಿ assurance ಕೊಟ್ಟರು. ಈ ರೀತಿಯಾಗದಂತೆ ನಾವು ಮುಂದೆ ಮಾಡಿಕೊಂಡು ಹೋಗುತ್ತೇವೆಂದು ಮಂತ್ರಿಗಳೂ ಕೂಡ ಅದಕ್ಕೆ ಉತ್ತರವನ್ನು ಕೊಟ್ಟರು. ಇವತ್ತಿನವರೆಗೂ ಅದನ್ನು ಸರಿಪಡಿಸಿಲ್ಲ. ಅಂದರೆ, ಬೇರೆ ಕ್ಷೇತ್ರಗಳಲ್ಲಿ ಜನ ವಸತಿ

ಇಲ್ಲವೆಂದ ಹಾಗಾಯಿತು. ಇದು ಕೇವಲ ರಾಜಕೀಯ ಲೆವೆಲ್ ಮೇಲೆಯೇ ನಾವು ಅಭಿವೃದ್ಧಿ ಮಾಡುವುದೆಂದಾಯಿತು. ಇದಕ್ಕೆ ಬೇರೆ ದೃಷ್ಟಿಯೇ ಇಲ್ಲವೇ? ಸದನದಲ್ಲಿ ಈ ಚರ್ಚೆಯಾಗಬೇಕಾಗಿದೆ. ಆ ರಸ್ತೆ ಮೇಲೆ ಎಲ್ಲಾ ಜನರೂ ಹೋಗುತ್ತಾರೆ. ಕೇವಲ ಕಾಂಗ್ರೆಸ್‌ನವರು ಹೋಗುತ್ತಾರೆಯೇ?...

(ಅಡಚಣೆ)

ಉಪಾಧ್ಯಕ್ಷರು: ಒಂದು ನಿಮಿಷ, ಅವರು ಉತ್ತರ ಹೇಳುತ್ತಾರೆ. ಕಾಗೇರಿಯವರೆ ನೀವೆಲ್ಲಾ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸ್ವಲ್ಪ ದೀರ್ಘವಾಗಿ ಚರ್ಚೆ ಮಾಡೋಣ ಅಂತ. ಎಸ್.ಎಂ. ಕೃಷ್ಣರವರ ಸರ್ಕಾರದಲ್ಲಿ ಏನಾಯಿತು?..... ಧರ್ಮಸಿಂಗ್‌ರವರ ಸರ್ಕಾರದಲ್ಲ.....

(ಅಡಚಣೆ)

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ): ಯಾವ ಸರ್ಕಾರದಲ್ಲೂ ಈ ರೀತಿಯಾದಂಥ ತಾರತಮ್ಯವಾಗಿಲ್ಲ.

ಶ್ರೀ ನೆ.ಲ. ನರೇಂದ್ರ ಬಾಬು: ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಮಾಡಬೇಡಿ. ಎಲ್ಲರಿಗೂ ಹಕ್ಕಿದೆ. ಎಲ್ಲರೂ ಕಂದಾಯ ಕಟ್ಟುತ್ತಾರೆ. ಎಲ್ಲಾ ಕ್ಷೇತ್ರಗಳಿಂದ ಹಣ ಬರುತ್ತದೆ ಸಮಪಾಲು ಹಂಚಿ.

(ಅಡಚಣೆ)

ಶ್ರೀ ಎಂ. ಕೃಷ್ಣಮೂರ್ತಿ: ಒಂದು ನಿಮಿಷ ಕೇಳಿ. ಹೋದ ಸಾರಿ ನಾನು ಜೆಡಿ (ಎಸ್)ನಲ್ಲೇ ಇದ್ದೆ. ಮಾನ್ಯ ಧರ್ಮಸಿಂಗ್‌ರವರು ಲೋಕೋಪಯೋಗಿ ಸಚವರಾಗಿದ್ದರು. ಅವರು ಆವತ್ತು ನನಗೆ ಏಳೂವರೆ ಕೋಟಿ ರೂಪಾಯಿಗಳನ್ನು ಕೊಟ್ಟರು. ಆದರೆ, ನಾನು ಜೆಡಿ (ಎಸ್)ನಲ್ಲಿದ್ದೂ ಕೂಡ ಇವತ್ತು ನಮಗೆ ಹಣ ಸಿಗುತ್ತಿಲ್ಲ. ಏಕೆ? Discrimination ಏಕೆ ಮಾಡಬೇಕು? ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿ ಮಾಡುತ್ತೇವೆಂದು ಹೇಳುವ ಜನ ಏಕೆ ಈ ತರಹ ಮಾಡಬೇಕು?

ಶ್ರೀ ಹಂಪನಗೌಡ ಬಾದರ್ಲಿ: ಅಭಿವೃದ್ಧಿ ರಂಗವೆಂದು ಹೆಸರಿಟ್ಟುಕೊಂಡು ಏಕೆ discrimination ಮಾಡುತ್ತೀರಿ?

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಕಾಂಗ್ರೆಸ್‌ನವರು ಮಾಡಿದ್ದರೆ ನಾನು ಹೇಳುತ್ತೇನೆ. ನನಗೆ ಕಾಂಗ್ರೆಸ್‌ನವರು 7 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಸರ್ಕಾರದ ನಿಲುವೇನು?

(ಅಡಚಣೆ)

ಉಪಾಧ್ಯಕ್ಷರು: ಅವರು ಉತ್ತರ ಕೊಡುತ್ತಾರೆ. ಒಂದು ನಿಮಿಷ ನೀವು ಕುಳಿತುಕೊಳ್ಳಿ. ಅವರು ಉತ್ತರ ಹೇಳುತ್ತಾರೆ. ಪಾಟೀಲರೇ, ನೀವು ಕುಳಿತುಕೊಳ್ಳಿ. ಉದಾಸಿಯವರೆ ಒಂದು ನಿಮಿಷದಲ್ಲಿ ಮುಗಿಸಿಬಿಡಿ. ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಯಾವುದೇ ಸರ್ಕಾರವಿರಲಿ ಅಭಿವೃದ್ಧಿಯಾಗಬೇಕೆಂದರೆ.....

ಉಪಾಧ್ಯಕ್ಷರು: ಉದಾಸಿಯವರೇ ಹೇಳಿ.

(ಅಡಚಣೆ)

ಶ್ರೀ ಸಿ.ಎಂ. ಉದಾಸಿ: ಈಗಾಗಲೇ ಉತ್ತರವನ್ನು ಕೊಟ್ಟಾಗಿದೆ.

(ಅಡಚಣೆ)

ಉಪಾಧ್ಯಕ್ಷರು: ಈಗ ಏನೂ ಕೇಳಿಸಲ್ಲ. ದಯವಿಟ್ಟು ಒಂದು ನಿಮಿಷ ಕೇಳಿ. ಪಾಟೀಲರೇ, ಕುಳಿತುಕೊಳ್ಳಿ. ಅವರೇನು ಹೇಳುತ್ತಾರೆ ಕೇಳಿ ಸ್ವಲ್ಪ.

ಶ್ರೀ ಸಿ.ಎಂ. ಉದಾಸಿ: ಈ ಮೊದಲೇ ಇದರ ಬಗ್ಗೆ ಚರ್ಚೆಯಾಗಿದೆ. ಮತ್ತೆ ಇದರ ಬಗ್ಗೆ ಚರ್ಚೆ ಮಾಡುವಂಥ ಅವಶ್ಯಕತೆ ಇಲ್ಲ.

ಉಪಾಧ್ಯಕ್ಷರು: ಪಾಟೀಲರೇ, ಒಂದು ನಿಮಿಷ ಅವರೇನು ಹೇಳುತ್ತಾರೆ ಕೇಳಿ. ಆಮೇಲೆ ಕೇಳೋಣ.

ಶ್ರೀ ಸಿ.ಎಂ. ಉದಾಸಿ: ಹಣಕಾಸಿನ ಲಭ್ಯತೆ ಮೇಲೆ ಅದನ್ನು ಸರಿಪಡಿಸುತ್ತೇವೆನ್ನುವ ಭರವಸೆಯನ್ನು ಕೊಟ್ಟಿದ್ದೇವೆ. ಅದಕ್ಕೆ ಅವಕಾಶ ಕೊಡಬೇಕೆಂದು ಇಷ್ಟು ಕೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ: ಯಾವಾಗ ಹೇಳಿ?

ಉಪಾಧ್ಯಕ್ಷರು: ಈಗ ಯಾವುದಾದರೊಂದು ಡೇಟ್ ಕೊಟ್ಟುಬಿಡಿ.

ಈಗ ಅವರು ಹಣಕಾಸಿನ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳು ಬಂದ ಮೇಲೆ ಎಂದು ಹೇಳಿದ್ದಾರಲ್ಲಾ.

(ಅಡಚಣೆ)

ಶ್ರೀ ಅಂಜನ ಮೂರ್ತಿ: ಮಾನ್ಯ ಮಂತ್ರಿಗಳು ಹಾರಿಕೆಯ ಉತ್ತರ ಕೊಡುತ್ತಿದ್ದಾರೆ.

ಉಪಾಧ್ಯಕ್ಷರು: ಹೊರಟ್ಟಿಯವರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಬಸವರಾಜ ಎಸ್. ಹೊರಟ್ಟಿ: 28 ಜೂನ್ 2006ರಂದು 11ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸುವ 67 ಪ್ರಶ್ನೆಗಳ ಪೈಕಿ 60 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂಧ–1)

ಉಪಾಧ್ಯಕ್ಷರು: ಮಂಡಿಸಲಾಗಿದೆ.

(ಗೊಂದಲ)

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ವಿಷಯ: ರಸ್ತೆ ಅಭಿವೃದ್ಧಿಗೆ ಹಣ ಬಿಡುಗಡೆಯಲ್ಲಿ ತಾರತಮ್ಯ ಮಾಡಿರುವ ಬಗ್ಗೆ

ಉಪಾಧ್ಯಕ್ಷರು: ಈಗ ಶೂನ್ಯವೇಳೆಯಲ್ಲಿ ಸಿ.ಟಿ. ರವಿಯವರು ಮಾತನಾಡಿ.

(ಅಡಚಣೆ)

ಉಪಾಧ್ಯಕ್ಷರು: ಮುಖ್ಯಮಂತ್ರಿಗಳು ನಾಳೆ ಬರುತ್ತಾರೆ, Finance Minister ಬರುತ್ತಾರೆ, ಅವರಿಬ್ಬರೂ ಚರ್ಚೆ ಮಾಡಿಬಿಟ್ಟು ಒಂದು ದಿವಸ ನಿಗದಿ ಮಾಡುತ್ತೇನೆಂದು ಹೇಳಿದ್ದಾರಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸನ್ಮಾನ್ಯ ಯಡಿಯೂರಪ್ಪನವರು ನಮ್ಮ ಸಮಕ್ಷಮ ಎಲ್ಲರಿಗೂ ಮಾತು ಕೊಟ್ಟಿದ್ದರು. ಉದಾಸಿಯವರ ಜೊತೆ ಅವರೂ ಇದ್ದರು. Finance Minister ರವರನ್ನು ಕರೆಸಿಬಿಟ್ಟು ಅವರಿಂದ ಒಂದು ಮಾತು ಕೊಡಿಸಬೇಕು. ಅವರು ಅವತ್ತು ಹೇಳಿದ್ದಾರೆ. ನಾನು ಸರಿ ಮಾಡುತ್ತೇನೆ ಎಂದು ಹೇಳಿದ್ದಾರೆ. ಅವರನ್ನು ಕರೆಸಿ.

(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರು ಸದನದ ಬಾವಿಗೆ ಬಂದರು)

(ಅಡಚಣೆ)

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಇದಕ್ಕೆ ಈಗ ಸರಿಯಾದ ಉತ್ತರ ಕೊಡಬೇಕು.

ಶ್ರೀ ಎನ್. ಧರ್ಮಸಿಂಗ್: ಮೊದಲೂ ಕೂಡ ಈ ಸದನದಲ್ಲಿ ಚರ್ಚೆಯಾಗಿದೆ. ಆ ಸಂದರ್ಭದಲ್ಲಿ ಉದಾಸಿಯವರು ನಿಖರವಾಗಿ, "ನಾನು ಉಪ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ, ಈ ರಾಜ್ಯದಲ್ಲಿರತಕ್ಕಂಥ ಪ್ರತಿ ಕ್ಷೇತ್ರಕ್ಕೆ ಸರಿಯಾದ ರೀತಿಯಲ್ಲಿ ಹಣ ಕೊಡುತ್ತೇವೆನ್ನ"ತಕ್ಕಂಥ ಮಾತನ್ನು ಹೇಳಿದ್ದಾರೆ. ಇವತ್ತೇನು ಈ ಸಭೆಯಲ್ಲಿ ಪ್ರಶ್ನೆಯನ್ನೆತ್ತಿದ್ದಾರೆ, ಇದಕ್ಕೆ ಈ ರೀತಿಯಾಗಿ ನಾವು ಹಾರಿಕೆಯ ಉತ್ತರ ಕೊಟ್ಟರೆ ಸಮಾಧಾನವಾಗುದಿಲ್ಲ. ಇದರ ಬಗ್ಗೆ ನಾವು ಪ್ರತಿಭಟನೆ ಮಾಡುತ್ತೇವೆ. ಪ್ರತಿಭಟನೆ ಮಾಡತಕ್ಕಂಥ ರೀತಿಯಲ್ಲಿ ನಮ್ಮೆಲ್ಲಾ ಶಾಸಕರೂ ಕೂಡ ಇವತ್ತು ಧರಣಿ ಮಾಡುತ್ತೇವೆ.

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್: ಸಚಿವರು ಹೇಳಿದ್ದಾರೆ. ಅವರು ಭರವಸೆ ಕೊಟ್ಟಿದ್ದಾರೆ. ಆದರೂ ಇವರ ನಡವಳಿಕೆಗಳು ಸರಿ ಇಲ್ಲ.

MR. DEPUTY SPEAKER: Finance Minister ರವರನ್ನು ಕರೆಸಿ.

ಶ್ರೀ ಎಂ.ಪಿ. ವೆಂಕಟೇಶ್: ಪ್ರತಿಯೊಂದಕ್ಕೂ ಇವರು ಸತ್ಯಾಗ್ರಹ ಮಾಡುತ್ತಾರೆ.

ಉಪಾಧ್ಯಕ್ಷರು: ಮಾನ್ಯ ಉದಾಸಿಯವರೆ, ಏನಾದರೂ ಒಂದು ಉತ್ತರ ಕೊಡಿ.

(ಅಡಚಣೆ)

ಶ್ರೀ ಸಿ.ಎಂ. ಉದಾಸಿ: ಇವರೆಲ್ಲಾ ಈಗಲೂ ಒಂದು ಮಾತನ್ನು ಹೇಳಿದರು. ಸನ್ಮಾನ್ಯ ಕೆ.ಎಂ. ಕೃಷ್ಣಮೂರ್ತಿಯವರು ಒಂದು ಮಾತನ್ನು ಹೇಳಿದರು.

(ಅಡಚಣೆ)

ಉಪಾಧ್ಯಕ್ಷರು: ಈಗ ಕೇಳಿಸುತ್ತಿಲ್ಲ. ಒಂದು ನಿಮಿಷ ಸುಮ್ಮನಿರಿ.

ಉಪಾಧ್ಯಕ್ಷರು: ಅವರೇನು ಹೇಳುತ್ತಾರೆ ಒಂದು ನಿಮಿಷ ಕೇಳೋಣ ಇರಿ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ತಮ್ಮ ಕೊಠಡಿಯಲ್ಲಿ ಕರೆಸಿರಿ. ವಿರೋಧ ಪಕ್ಷದ ಎಲ್ಲರೂ ಬರುತ್ತೇವೆ. ಮಾತನಾಡುತ್ತೇವೆ. ಸರ್ಕಾರದಿಂದ ನಿರ್ದಿಷ್ಟವಾದಂಥ ಉತ್ತರ ಬಂದ ಮೇಲೆ ನಾವು ಧರಣಿ ವಾಪಸ್ಸು ತೆಗೆದುಕೊಳ್ಳುತ್ತೇವೆ. ಅಲ್ಲಿಯವರೆಗೆ ತೆಗೆದುಕೊಳ್ಳುವುದಿಲ್ಲ.

(ಅಡಚಣೆ)

ಉಪಾಧ್ಯಕ್ಷರು: ಈಗ ಸದನವನ್ನು 2.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 12.59 ಗಂಟೆಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 2.30 ಗಂಟೆಗೆ ಸಮಾವೇಶಗೊಳ್ಳುವುದು)

(ಸದನವು 2 ಗಂಟೆ 57 ನಿಮಿಷಕ್ಕೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(ಕಾಂಗ್ರೆಸ್ ಪಕ್ಷದ ಕೆಲವು ಸದಸ್ಯರು ಸದನದ ಬಾವಿಯಲ್ಲಿದ್ದರು)

3. ಅಧ್ಯಕ್ಷರ ಅಪ್ಪಣೆ ಮೇರೆಗೆ:

ವಿಷಯ: ರಸ್ತೆ ಅಭಿವೃದ್ಧಿಗೆ ಹಣ ಬಿಡುಗಡೆಯಲ್ಲಿ ಆಗಿರುವ ತಾರತಮ್ಯದ ಬಗ್ಗೆ

ಅಧ್ಯಕ್ಷರು: ಮಾನ್ಯ ಸದಸ್ಯರುಗಳು ಏನು ವೆಲ್ಲಿಗೆ ಬಂದಿದ್ದೀರಿ, ತಾವು ದಯಮಾಡಿ ತಮ್ಮ ಆಸನಗಳಿಗೆ ಹೋಗಬೇಕು.

(ಈ ಹಂತದಲ್ಲಿ ಸನ್ಮಾನ್ಯ ಸದಸ್ಯರಾದ ಶ್ರೀ ಸಿ.ಎಸ್. ನಾಡಗೌಡರವರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಅಧ್ಯಕ್ಷರು: ಮಾನ್ಯ ಉಪಮುಖ್ಯಮಂತ್ರಿಗಳು ಸದನಕ್ಕೆ ದಯಮಾಡಿಸಿದ್ದಾರೆ. ಅವರು ಸ್ಟೇಟ್‌ಮೆಂಟನ್ನು ಮಾಡುತ್ತಾರೆ. ದಯಮಾಡಿ ತಾವು ತಮ್ಮ ಆಸನಗಳಿಗೆ ಹೋಗಿ.

(ಈ ಹಂತದಲ್ಲಿ ಕಾಂಗ್ರೆಸ್‌ನ ಕೆಲವು ಸದಸ್ಯರು ಸದನದ ಬಾವಿಯಿಂದ ತಮ್ಮ ಆಸನಗಳಿಗೆ ಹಿಂತಿರುಗಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಈ ಹಿಂದೆ ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರುಗಳು ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದಾಗ ತಮ್ಮ ಕೊಠಡಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಕರೆದು ಈ ತರಹದ ಏನೇ ವ್ಯತ್ಯಾಸಗಳಾದರೂ ಸರಿಪಡಿಸೋಣ, ನಾವುಗಳೆಲ್ಲರೂ ನಿಮ್ಮಗಳ ಜೊತೆಯಲ್ಲಿದ್ದೇವೆ, ಆ ರೀತಿ ಹೆಚ್ಚು ವ್ಯತ್ಯಾಸಗಳು ಆಗದ ರೀತಿಯಲ್ಲಿ ಎಚ್ಚರವಹಿಸುತ್ತೇವೆನ್ನುವಂತಹ ಮಾತನ್ನು ಹೇಳಿದ್ದೇವೆ. ಈಗಲೂ ಸಹ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಯಾವ ಯಾವ ಕ್ಷೇತ್ರಕ್ಕೆ ಆ ರೀತಿಯ ಆದ್ಯತೆಯ ಮೇಲೆ ಹೆಚ್ಚು ಅವಕಾಶ ಸಿಕ್ಕಿಲ್ಲ, ಅಭಿವೃದ್ಧಿ ಕಾರ್ಯಗಳಿಗೆ ಧಕ್ಕೆಯಾಗಿದೆ, ಡಿಸ್‌ಕ್ರಿಮಿನೇಷನ್ ಆಗಿದೆ ಈ ತರಹ ನಿಮ್ಮ

ಅಭಿಪ್ರಾಯಗಳೇನು ಇದೆ, ಅದನ್ನು ಪರಿಶೀಲನೆ ಮಾಡಿದ ಅದಕ್ಕೆ ಹಣಕಾಸಿನ ಸುಧಾರಣೆಯನ್ನು ಮಾಡಿ ಅದನ್ನು ಸರಿಪಡಿಸುವ ಬಗ್ಗೆ ಏನು ಸಾಧ್ಯತೆ ಇದೆಯೋ ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ, ನಾನು ಮತ್ತು ಅವರು ಕುಳಿತುಕೊಂಡು ನಿಮ್ಮ ಕೆಲವು ಪ್ರಮುಖ ವಿರೋಧಪಕ್ಷದ ನಾಯಕರನ್ನು ಕರೆದುಕೊಂಡು ನಿತ್ಯ ಕಾರ್ಯಕಲಾಪಗಳು ನಡೆಯಬೇಕಾಗಿದೆ. ನಿಮ್ಮ ಮನಸ್ಸಿನಲ್ಲಿರುವಂತಹ ಭಾವನೆಗಳನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಬಂದ ತಕ್ಷಣ ನಿಮ್ಮ ಜೊತೆಯಲ್ಲಿ ಮಾತನಾಡಿ ಆ ಚೌಕಟ್ಟಿನಲ್ಲಿ ಏನೇನು ಸರಿಪಡಿಸುವುದಕ್ಕೆ ಸಾಧ್ಯವಿದೆಯೋ, ಅದನ್ನು ಸರಿಪಡಿಸುವಂತಹ ಆ ಒಂದು ಡಿಸ್‌ಕ್ರಿಮಿನೇಷನ್ ಆಗಿರುವ ಬಗ್ಗೆ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಕುಳುತುಕೊಂಡು ಮಾಡುತ್ತೇವೆ. ದಯಮಾಡಿ ಸಹಕರಿಸಬೇಕು. ಇನ್ನುಳಿದ ಕಾರ್ಯಕಲಾಪಗಳು ಪ್ರಾರಂಭವಾಗುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಬಿ. ಶಿವರಾಂ: ಮಾನ್ಯ ಅಧ್ಯಕ್ಷರೆ, ಈಗ ತಾವು ಎರಡು ಸಾರಿ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಒಂದು ಸಾರಿ ಆರ್‌ಡಿಪಿಆರ್ ಮಿನಿಸ್ಟರ್ ವಿಚಾರದಲ್ಲಿ ಚರ್ಚೆಯಾದಾಗ ಸಡಕ್ ವಿಚಾರದಲ್ಲಿ ಅಲ್ಲಿ ಸ್ಪೀಕರ್ ಸಮ್ಮುಖದಲ್ಲಿ ತಾವು ಬಹಳಷ್ಟು ಆಶ್ವಾಸನೆಗಳನ್ನು ಕೊಟ್ಟಿದ್ದೀರಿ. ಇದು ಎಷ್ಟು ದಿವಸಗಳಾಯಿತು? ಏನಾದರೂ ಒಂದು ಚೂರು ಕಿಮ್ಮತ್ತಾದರೂ ಇದೆಯಾ? ಇನ್ನು ಎರಡನೆಯದು, ಈಗ ತಾವು ಎರಡನೇ ಸಾರಿ ಸೇರಿದ್ದೀರಿ. ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ನಾನು ನೇರವಾಗಿ ತಮಗೆ ಹೇಳುತ್ತೇನೆ. ಏನೇನು ಆಗಿದೆ, ಎಷ್ಟು ತಾರತಮ್ಯವಿದೆ, ಒಂದು ವಾರದಲ್ಲಿ ಬಗೆಹರಿಸುತ್ತೇವೆಂದು ಆಶ್ವಾಸನೆಯನ್ನು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಎದುರಿಗೆ ಕೊಟ್ಟರು. ಇದು ಹೌದೋ ಅಥವಾ ಅಲ್ಲವೋ? ಇದು ಎಷ್ಟು ದಿವಸಗಳಾಯಿತು? ಕನಿಷ್ಠ ಒಂದು ವಿಚಾರಕ್ಕಾದರೂ ಸ್ಪಂದಿಸಿದ್ದರೆ ನಾವು ನೀವು ಹೇಳಿದಕ್ಕೆಲ್ಲಾ ಒಪ್ಪಿಕೊಂಡು ಸಹಕರಿಸಿಕೊಂಡು ಸದನವನ್ನು ನಡೆಸಿಕೊಂಡು ಹೋಗಬೇಕೆಂದರಲ್ಲಿ ಎರಡನೆಯ ಪ್ರಶ್ನೆ ಇಲ್ಲ. ಅದು ಒಂದೂ ಕೂಡ ಅನುಷ್ಠಾನಕ್ಕೆ ಬರದೇ ಹೋದರೆ ಏನು ಮಾಡಬಹುದು ಎಂಬ ಬಗ್ಗೆ ತಾವೇ ಹೇಳಿ. ತಾವು ವಿರೋಧ ಪಕ್ಷದಲ್ಲಿದ್ದರು ಬಹಳ ದಿವಸಗಳ ಕಾಲ ಕೆಲಸವನ್ನು ಮಾಡಿದ್ದೀರಿ. ಇಂತಹ ವಿಚಾರಗಳು ಬಂದಾಗ.....

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ ಒಂದು ನಿಮಿಷ, ತಾಳಿ.

ಶ್ರೀ ಬಿ. ಶಿವರಾಮು: ನಾನು ಏನು ಹೇಳಿದೆ?

ಶ್ರೀ ಸಿ.ಟಿ. ರವಿ: ನೀವು ಸರ್ಕಾರದಲ್ಲಿದ್ದಾಗ ಏನು ಮಾಡಿದಿರಿ ಅದನ್ನು ಹೇಳಿ.

(ಅಡಚಣೆ)

(ಈ ಹಂತದಲ್ಲಿ ಹಲವು ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡುತ್ತಿದ್ದರು)

3.00 P.M.

ಅಧ್ಯಕ್ಷರು: ಈಗ ಎಲ್ಲಾ ಹೀಗೆ ನಿಂತಕೊಂಡು ಮಾತನಾಡಿದರೆ ಹೇಗೆ?

ಮಾನ್ಯ ಸದಸ್ಯರೊಬ್ಬರು: ಅವರ ಅವಧಿಯಲ್ಲಿ ಏನು ಮಾಡಿದ್ದಾರೆಂಬ ಬಗ್ಗೆ ಅವರು ರೆಕಾರ್ಡ್ಸ್ ನೋಡಲಿ. ಯಾವ್ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಖರ್ಚು ಮಾಡಿದ್ದಾರೆಂಬ ಬಗ್ಗೆ ನೋಡಲಿ.

(ಅಡಚಣೆ)

ಶ್ರೀ ಬಿ. ಶಿವರಾಮು: ಅವರು ಉತ್ತರ ಕೊಡುತ್ತಿದ್ದಾರೆ. ನೀವ್ಯಾಕೆ ಮಾತನಾಡುತ್ತಿದ್ದೀರಿ.

ಮಾನ್ಯ ಸದಸ್ಯರೊಬ್ಬರು: ನೀವೆಲ್ಲಾ ಒಂದೇ ಎಂದು ಹೇಳುತ್ತಿದ್ದೀರಿ, ನಿಮ್ಮ ಆತ್ಮಸಾಕ್ಷಿಯಾಗಿ ಹೇಳಿ.

(ಅಡಚಣೆ)

ಅಧ್ಯಕ್ಷರು: ದಯವಮಾಡಿ ಕುಳಿತುಕೊಳ್ಳಿ, ಶಿವರಾಂ ಅವರು ಮಾತನಾಡುತ್ತಿದ್ದಾರೆ. ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

(ಅಡಚಣೆ)

ಶ್ರೀ ಬಿ. ಶಿವರಾಮು: ಮಾನ್ಯ ಅಧ್ಯಕ್ಷರೇ, ನೀವು ಇದ್ದಾಗ ಏನು ಮಾಡಿದ್ದಿರಿ ಎಂದು ಅವರು ಕೇಳುತ್ತಿದ್ದಾರೆ. ಈಗ ಮಾನ್ಯ ಯಡಿಯೂರಪ್ಪನವರು ವಿರೋಧಪಕ್ಷದಲ್ಲಿದ್ದಾಗ ಸಾಕಷ್ಟು ಸಾರಿ ಇಂತಹ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ನಿಮ್ಮ ಕೊಠಡಿಗಳಿಗೆ ಕರೆದು ಚರ್ಚೆ ಮಾಡಿದಾಗ ಅವರ ವಿಚಾರಗಳಿಗೆ ಸ್ಪಂದಿಸಿದ್ದರೋ ಇಲ್ಲವೋ? ಆದರೆ ಈಗೇನಾಗುತ್ತಿದೆಯೆಂದರೆ ನೀವು ಅವರನ್ನು ಕರೆಸಿ ಮಾತನಾಡುತ್ತೀರೇ ಹೊರತು ಒಂದೂ ಅನುಷ್ಠಾನಕ್ಕೆ ಬರುತ್ತಿಲ್ಲವೆಂಬ ಉದ್ದೇಶಕ್ಕಾಗಿ ನಾವು ಈ ಪ್ರತಿಭಟನೆ ಮಾಡುತ್ತಿದ್ದೇವೆಯೇ ಹೊರತು ಇನ್ನಾವುದೇ ದುರುದ್ದೇಶದಿಂದ ಅಲ್ಲ. ಇದನ್ನು ದಯವಿಟ್ಟು ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಆದರೆ ಅವತ್ತು ಅವರು ವಿರೋಧ ಪಕ್ಷದಲ್ಲಿದ್ದಾಗ ನಿಮ್ಮ ಸರ್ಕಾರ ಅವರಿಗೆ ಸ್ಪಂದಿಸಿದೆಯೆಂದು ನಾನು ನೇರವಾಗಿ ಹೇಳುತ್ತಿದ್ದೇನೆ. ಇಲ್ಲ ಎನ್ನುವ ಮಾತನ್ನು ಅವರು ಹೇಳಲಿ. ಒಂದು ನಿಮಿಷ ತಡೆಯಿರು, ಅವರೇ ಹೇಳುತ್ತಾರೆ. ಅವರು ವಿರೋಧ ಪಕ್ಷದಲ್ಲಿ ಕೆಲಸ ಮಾಡಿಲ್ಲವೇ? ಅವರಿಗೆ ಹೇಳುತ್ತಿದ್ದೇವೆ, ಅವರು ಅದಕ್ಕೆ ಉತ್ತರಿಸಲಿ. ಅವರ ಸಮ್ಮುಖದಲ್ಲಿ ಒಂದು ವಾರದೊಳಗೆ ಮಾಡುತ್ತೇವೆಂಬ ಮಾತ್ನು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಅಧ್ಯಕ್ಷರು: ಮಾನ್ಯ ಶಿವರಾಮುರವರೇ, ಆ ಕಡೆ ಏತಕ್ಕೆ ತಿರುಗಿಕೊಂಡು ಮಾತನಾಡುತ್ತಿದ್ದೀರಿ. ಉಪಮುಖ್ಯಮಂತ್ರಿಗಳು ಮಾತನಾಡುತ್ತಾರೆ. ನೀವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಹಿರಿಯ ಸದಸ್ಯರಾದ ಮಾನ್ಯ ಶಿವರಾಮುರವರಲ್ಲಿ ವಿನಂತಿ. ನಮ್ಮ ಶಾಸಕರು ಯಾರ್ಯಾರು ಆಗ ವಿರೋಧ ಪಕ್ಷದಲ್ಲಿ ಕುಳಿತುಕೊಂಡಿದ್ದರೂ ಈಗ ಅವರಿಗೇನಾಯಿತು ಎನ್ನುವ ಅವರ ಅನುಭವದ ಮಾತುಗಳನ್ನು ಅವರು ಹೇಳಿದರು. ಅಲ್ಲಿ ನೀವು ಕುಳಿತು ಏನು ಮಾಡುತ್ತೀರಿ ಎಂದು ಹೇಳುವುದಕ್ಕಿಂತ ಹೆಚ್ಚಾಗಿ ಇಲ್ಲೇನು ಸ್ವಲ್ಪ ವ್ಯತ್ಯಾಸವಾಗಿದೆ ಅದರ ಬಗ್ಗೆ ಸ್ವಲ್ಪ ಚರ್ಚೆಯಾಯಿತು, ಅಧ್ಯಕ್ಷರ ಕೊಠಡಿಯಲ್ಲಿ ಮಾತನಾಡಿದರು, ಮಾತನಾಡಿ ಎಷ್ಟು ದಿವಸವಾಯಿತು? ಐದಾರು ದಿವಸವಾಯಿತು. ಮತ್ತೊಮ್ಮೆ ನಾನು ಇದರ ಬಗ್ಗೆ ಬಹಳ ವಿವರಕ್ಕೆ ಹೋಗುವುದಿಲ್ಲ. ಇಲ್ಲೇನಾಯಿತು, ಅಲ್ಲೇನಾಯಿತು ಎಂಬ ಬಗ್ಗೆ ಚರ್ಚೆ ಬೇಡ. ಮುಖ್ಯಮಂತ್ರಿಗಳು ಬಂದ ಮೇಲೆ ಅವರೊಂದಿಗೆ ಕುಳಿತು ಚರ್ಚೆ ಮಾಡಿ ಅದನ್ನು ಸರಿಪಡಿಸಲಿಕ್ಕೆ ಏನೇನು ಸಾಧ್ಯವೋ ಅದನ್ನು ಮಾಡೋಣ. ಅಲ್ಲಿಯವರೆಗೆ ದಯಮಾಡಿ ಸಹಕರಿಸಿ, ಮುಂದಿನ ಕಾರ್ಯಕಲಾಪಗಳು ನಡೆಯಲಿಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಬಿ. ಶಿವರಾಮು: ದಿನಾಂಕ 13 ಹಾಗೂ 14 ರಂದು ತಮ್ಮ ಕೊಠಡಿಯಲ್ಲೇ ಚರ್ಚೆಯಾಯಿತು. ಆಗ ಅವರು ಒಂದು ವಾರದಲ್ಲಿ ಆಗುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದರು ಹೌದಾ? ಅಧ್ಯಕ್ಷರೇ, ಹೌದಲ್ಲವೇ, ನೋಡಿ ಅಧ್ಯಕ್ಷರೇ ಒಪ್ಪಿಕೊಳ್ಳುತ್ತಿದ್ದಾರೆ. 14 ರಿಂದ 28ನೇ ತಾರೀಖು ಇವತ್ತು, ಒಂದು ವಾರದ ಕಾಲಾವಕಾಶವನ್ನು ಕೊಟ್ಟಿದ್ದರೂ ಆಗಲಿಲ್ಲ, ಹಿಂದಿನ ಸದನವಾಗಿ ಎರಡು ತಿಂಗಳಾಯಿತು. ಈಗ 13ಹಾಗೂ 14 ರಂದು ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಶಿವರಾಮುರವರೇ ನಾವಿನ್ನೂ ಅಧಿಕಾರಕ್ಕೆ ಬಂದ ಇನ್ನೂ ನಾಲ್ಕು ತಿಂಗಳೂ ಮುಗಿದಿಲ್ಲ, ಇಷ್ಟು ಬೇಗ ಆವೇಶಕ್ಕೆ ಒಳಗಾಗುತ್ತೀರಿ? ಸರಿಪಡಿಸೋಣ. ಮುಖ್ಯಮಂತ್ರಿಗಳು ಬಂದ ಮೇಲೆ ಕುಳಿತು ಮಾತನಾಡುತ್ತೇವೆಂದು ಹೇಳುತ್ತಿದ್ದೇವೆಲ್ಲಾ.

ಶ್ರೀ ಬಿ. ಶಿವರಾಮು: ತಾವು ಒಂದು ವಾರದೊಳಗೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾವು ಅದನ್ನು ಸರಿಪಡಿಸುತ್ತೇವೆಂದು ಹೇಳುತ್ತಿದ್ದೇವೆ. ಮುಖ್ಯಮಂತ್ರಿಗಳು ಬರಲಿ, ಬಂದ ಮೇಲೆ ಮಾತನಾಡುತ್ತೇವೆಂದು ಹೇಳುತ್ತಿದ್ದೇವಲ್ಲಾ.

ಶ್ರೀ ಬಿ. ಶಿವರಾಮು: ಒಂದು ವಾರದೊಳಗೆ ಮಾಡುವುದಾಗಿ ನೇರವಾಗಿ ಅಧ್ಯಕ್ಷರ ಕೊಠಡಿಯಲ್ಲಿ ಹೇಳಿದ್ದೀರಲ್ಲಾ.

ಅಧ್ಯಕ್ಷರು: ನಿಮಗೆ ಮತ್ತೆ ಪ್ರತಿಭಟನೆ ಮಾಡಲಿಕ್ಕೆ ಅವಕಾಶವಿದ್ದೇ ಇದೆ. ಮುಖ್ಯಮಂತ್ರಿಗಳು ಇವತ್ತು ಸಾಯಂಕಾಲ ಬರುತ್ತಾರೆ. ಮುಖ್ಯಮಂತ್ರಿಗಳು

ಉಪಮುಖ್ಯಮಂತ್ರಿಗಳೂ ವಿರೋಧಪಕ್ಷದ ನಾಯಕರುಗಳನ್ನು ಕರೆಸಿಕೊಂಡು ಮಾತನಾಡಿ ಏನೇನು ವ್ಯತ್ಯಾಸಗಳಿವೆ ಅವನ್ನೆಲ್ಲಾ ಸರಿಪಡಿಸುತ್ತೇವೆಂದು ಖಚಿತವಾಗಿ ಸದನದಲ್ಲಿ ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸರ್, ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮುಂದೆ ಏನು ಮಾಡಬೇಕು ಅದರ ಬಗ್ಗೆ ನಮ್ಮ ಪ್ರಯತ್ನವನ್ನು ನಾವು ಮಾಡುತ್ತೇವೆ.

ಅಧ್ಯಕ್ಷರು: ನಿಮ್ಮ ಹಣಕಾಸಿನ ಪರಿಸ್ಥಿತಿ ನೋಡಿ, ಅದನ್ನು ಬಿಟ್ಟು ಏನು ಕೋಟಿ ಕೋಟಿ ರೂ.ಗಳನ್ನು ಕೊಡಲಿಕ್ಕಾಗುತ್ತದೆಯೇ? ಅದನ್ನು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸರ್, ಆಡಳಿತ ಪಕ್ಷದಲ್ಲಿದ್ದಾಗ ಯಾವುದಾದರೊಂದಕ್ಕೆ ಹೆಚ್ಚು ಕೊಡುವಂತಹದ್ದು ಎಲ್ಲಾ ಕಾಲದಲ್ಲಿಯೂ ಆಗುತ್ತದೆ. ಅದು ಮೊದಲಿನಿಂದಲೂ ನಡೆದುಕೊಂಡೇ ಬಂದಿರುವುದು, ನೀವೇನು ಮಾಡಿದಿರಿ? ಎಷ್ಟೆಷ್ಟು ಕೊಟ್ಟಿದ್ದಿರಿ ಎಂಬ ವಿವರಕ್ಕೆ ಹೋದರೆ ಬಹಳ ಬೇರೆಯಾಗುತ್ತದೆ. ಅದು ಬೇಡ., ಈಗ ನಿಮಗೇನು ನೋವಾಗಿದೆ, ಅದರ ಬಗ್ಗೆ ಮುಖ್ಯಮಂತ್ರಿಗಳು ಬಂದ ಮೇಲೆ ಕುಳಿತು ಸರಿಪಡಿಸೋಣ.

ಅಧ್ಯಕ್ಷರು: ಈಗ ನೀವೆಲ್ಲಾ ಕುಳಿತುಕೊಳ್ಳಿ, ಅದನ್ನು ಅವರು ಸರಿಪಡಿಸುತ್ತಾರೆ. ಈಗ Let us go, ಈಗ ಡಿಮ್ಯಾಂಡ್ಸ್ ಬಗ್ಗೆ ನಿನ್ನೆ ಎರಡು ಗಂಟೆ ನಡೆದಿದೆ. ಇವತ್ತು ಚರ್ಚೆಯಾಗಲಿ. ದಯಮಾಡಿ.

(ಅಡಚಣೆ)

ಶ್ರೀ ಬಿ.ಆರ್. ಪಾಟೀಲ್: ಸರ್, ಈಗ ನಮ್ಮದೊಂದು ಮುಖ್ಯವಾದ ವಿಷಯದ ಬಗ್ಗೆ ಸ್ವಲ್ಪ ಮಾತನಾಡುವುದಿದೆ.

ಅಧ್ಯಕ್ಷರು: ನಿಮ್ಮದೇನು? ನೀವು ಆಡಳಿತ ಪಕ್ಷದಲ್ಲಿರುವವರು. ಅಲ್ಲೇ ಮಾತನಾಡಿ, ದಯಮಾಡಿ ಕುಳಿತುಕೊಳ್ಳಿ. ಅವರದೇನು ಅಂದರೆ ಆಡಳಿತ ಪಕ್ಷದವರು ತಾರತಮ್ಯ ಮಾಡುತ್ತಿದ್ದಾರೆಂದು ಆದರೆ ನಿಮ್ಮದೇನು? ನಿಮ್ಮ ಮಂತ್ರಿಗಳ ಹತ್ತಿರ ಹೋಗಿ ಮಾಡಿಸಿಕೊಳ್ಳಿ, ಕುಳಿತುಕೊಳ್ಳಿ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ): ಸರ್, ಈಗೇನಾಗಿದೆಯೆಂದರೆ ಪ್ರತಿಯೊಂದು ಸಲ ನಾವು ಮಾತನಾಡುವಾಗ ಹಿಂದಿನ ಸರ್ಕಾರ ನೀವು ಹಾಗೆ ಮಾಡಿದ್ದೀರಿ ಎಂದು ಹೇಳುತ್ತಾರೆ. , ಧ್ಯಾನಸಿಂಗ್ ಸಾಹೇಬರು ಮುಖ್ಯಮಂತ್ರಿಗಳಾಗಿದ್ದಾಗ ಧಾರಾಳ ಮನಸ್ಸು. ಒಂದು ನಿಮಿಷ ಇರಿ, ನಾವು ಮಾತನಾಡುತ್ತೇನೆ.

(ಅಡಚಣೆ)

ಅಧ್ಯಕ್ಷರು: ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ, ಅವರಿಗೆ ದುಡ್ಡು ಕೊಡುತ್ತಿಲ್ಲವೆಂದು ಮಾತನಾಡಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ? ದಯಮಾಡಿ ಕುಳಿತುಕೊಳ್ಳಿ.

(ಅಡಚಣೆ)

ಮಾನ್ಯ ಸದಸ್ಯರೊಬ್ಬರು: ಸರ್, ಅವರ ಅವಧಿಯಲ್ಲಿ ನಡೆದಿರುವ ಬಗ್ಗೆ ಕಡತವನ್ನು ತೆಗೆಸಿ ನೋಡಿ.

(ಗೊಂದಲ)

ಅಧ್ಯಕ್ಷರು: ನೀವು ನೀವೇ ಏತಕ್ಕೆ ಮಾತನಾಡುತ್ತೀರಿ? ಎಲ್ಲರೂ ಕುಳಿತುಕೊಳ್ಳಿ ದಯಮಾಡಿ. ಈಗ ನಾಡಗೌಡರೇ ಅವರು ಖಚಿತವಾಗಿ ಹೇಳಿದ್ದಾರೆ. ಅವರು ಮತ್ತೆ ಅವರ ಮಾತಿನ ಪ್ರಕಾರ ನಡೆದುಕೊಳ್ಳದಿದ್ದರೆ ನಿಮಗೆ ಮತ್ತೆ ಪ್ರತಿಭಟನೆ ಮಾಡಲಿಕ್ಕೆ ಅವಕಾಶವಿದೆ. 14ನೇ ತಾರೀಖಿನವರೆಗೆ ಹೌಸ್ ನಡೆಯುತ್ತದೆ. ಈಗ ಡಿಮ್ಯಾಂಡ್ಸ್‌ಗಳನ್ನು ಚರ್ಚೆಗೆ ತೆಗೆದುಕೊಳ್ಳೋಣ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ): ಅಧ್ಯಕ್ಷರೆ, ನಾನು ಒಬ್ಬ ಸದಸ್ಯನಾಗಿ ನಮಗೆ ಆಗುವ ನೋವಿನ ಬಗ್ಗೆ ಈ ಸದನದಲ್ಲಿ ಹೇಳಲಿಕ್ಕಾಗಲಿಲ್ಲವೆಂದರೆ ಎಲ್ಲಿ ಹೇಳೋಣ.

ಅಧ್ಯಕ್ಷರು: ನಿಮ್ಮೆಲ್ಲರ ಪರವಾಗಿ ಅವರು ಮಾತನಾಡಿದ್ದಾರೆ, ಅದಕ್ಕೆ ಉತ್ತರವನ್ನು ಉಪಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಎಲ್ಲರಿಗೂ ಅವರು ಹೇಳಬೇಕೆಂದರೆ ಹೇಗಾಗುತ್ತದೆ?

(ಅಡಚಣೆ)

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ): ಅನ್ಯಾಯವಾಗಿದೆ. ನಮ್ಮ ಮತಕ್ಷೇತ್ರದ ಅಭಿವೃದ್ಧಿಯಲ್ಲಿ ಯಾರ ನಮ್ಮ ಸಹಪಾಠಿಗಳಾಗಿದ್ದರು ಅವರ ಕೆಲಸ ಮಾಡುವುದರಲ್ಲೇ ಅವರು ನಿರತರಾದರು, ಈಗಲೂ ಕೂಡ ನಮಗೆ ಅನ್ಯಾಯವಾಗಿದೆ. ಈಗ ನಂಜುಂಡಪ್ಪ ವರದಿ. ಒಂದು ನಿಮಿಷ ಇರಿ, ನಾನೇನು ಹೇಳುತ್ತಿದ್ದೇನೆ. ನೀವೇನು ಅರ್ಥ ಮಾಡಿಕೊಳ್ಳುತ್ತೀದ್ದೀರಿ.

(ಅಡಚಣೆ)

ಶ್ರೀ ಬಿ. ಶಿವರಾಮು: ನೀವು ಅರ್ಥ ಮಾಡಿಕೊಳ್ಳಿ. ಮಾನ್ಯ ಧರಂಸಿಂಗ್ ಅವರ ಮುಖ್ಯಮಂತ್ರಿಗಳಾಗಿದ್ದಾಗ ಜಿಲ್ಲೆಗಳಲ್ಲಿ ಏನಾಯಿತು ಎಂಬ ಬಗ್ಗೆ ಹೇಳುತ್ತಿದ್ದೇವೆ. ನಮಗೆ ಜಿಲ್ಲೆಗಳಲ್ಲಿ ಆಗ ಜೊತೆಗಿದ್ದಾಗ ಏನೇನಾಯಿತು ಎಂಬ ಬಗ್ಗೆ ಕೂಡ ನೆನಪಿದೆ.

(ಅಡಚಣೆ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ ಅವರು ಖಚಿತವಾಗಿ ಹೇಳಿದ್ದಾರೆ. ಅದನ್ನೇ ಮುಂದುವರೆಸಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ): ಒಂದು ನಿಮಿಷ ಅಧ್ಯಕ್ಷರೇ, ರಾಜ್ಯದ ಅಭಿವೃದ್ಧಿಯಾಗಬೇಕೆನ್ನುವ ದೃಷ್ಟಿಕೋನಕ್ಕೋಸ್ಕರ ನಂಜುಂಡಪ್ಪ ವರದಿಯನ್ನು

ಸಿದ್ಧಮಾಡಿದಿರಿ, ಅದರ ಆಧಾರದ ಮೇಲೆ ಇವತ್ತಿನವರೆಗೂ ನೀವೇನಾದರೂ ಕ್ರಮಗಳನ್ನು ತೆಗೆದುಕೊಂಡಿರುವಿರಾ? ಎಲ್ಲಿ ಹಿಂದುಳಿದ ಪ್ರದೇಶಗಳಿವೆ ಅಲ್ಲಿಯೇ ಅನ್ಯಾಯ ಮಾಡುತ್ತೀರಿ.

(ಅಡಚಣೆ)

ಶ್ರೀ ಬಿ. ಶಿವರಾಮು: ನೀವೇನು ಹೈಸ್ಕೂಲ್, ಕಾಲೇಜುಗಳನ್ನು ಕೊಟ್ಟಿದ್ದೀರಲ್ಲಾ, ಯಾವ ವರದಿಯ ಮೇಲೆ ಕೊಟ್ಟಿದ್ದೀರಿ ಎಂಬ ಬಗ್ಗೆ ವರದಿಯಿದೆ. ನೀವು ಯಾವ ವರದಿಯ ಆಧಾರದ ಮೇಲೆ ಕೊಟ್ಟಿದ್ದೀರಿ ಎಂಬ ಬಗ್ಗೆ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಂಜುಂಡಪ್ಪ ವರದಿಯ ಆಧಾರದ ಮೇಲೆ ನೀವೇನು ಮಾಡಿದ್ದಿರಿ, ನಾವೇನು ಮಾಡಲಿಕ್ಕೆ ಹೊರಟಿದ್ದೇವೆ, ಅದರ ಬಗ್ಗೆ ಬಜೆಟ್‌ನಲ್ಲಿ ಬಹಳ ಸ್ಪಷ್ಟವಾಗಿದೆ. ಈ ವರ್ಷದ ಕೊನೆಯಲ್ಲಿ ನಾವು ಬಜೆಟ್‌ನಲ್ಲಿ ನಾನು ಏನು ಹೇಳಿದ್ದೇವೆ? ಹಿಂದೆ ಇದ್ದುದಕ್ಕೂ, ಈಗಿರುವುದಕ್ಕೂ ವ್ಯತ್ಯಾಸವೇನು, ನಂಜುಂಡಪ್ಪ ವರದಿಯಾಧಾರದ ಮೇಲೆ ಆ ಭಾಗದಲ್ಲಿ ಎಷ್ಟು ನ್ಯಾಯ ಸಿಕ್ಕಿದೆ ಎನ್ನುವುದಕ್ಕೆ ಅಂಕಿ ಅಂಶಗಳೊಂದಿಗೆ ನೀವೇ ಒಪ್ಪಿಕೊಳ್ಳುವಂತೆ ನಾವು ಕೆಲಸವನ್ನು ಮಾಡುತ್ತೇವೆ. ಅಲ್ಲಿಯವರೆಗೆ ನಮಗೆ ಸ್ವಲ್ಪ ಸಮಯ ಕೊಡಿ. ಇನ್ನೂ ನಮ್ಮದು ಪ್ರಾರಂಭವಾಗಿಲ್ಲ, ಈಗಲೇ ಏತಕ್ಕೆ ಸುಮ್ಮನೆ ಚರ್ಚೆ?

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ): ನಾವು ಯಾವುದೇ ದುರುದ್ದೇಶದಿಂದ ಮಾತನಾಡುತ್ತಿಲ್ಲ, ಏನಾಗಿದೆಯೆಂಬ ಬಗ್ಗೆ ಸತ್ಯವನ್ನೇ ಹೇಳುತ್ತಿದ್ದೇವೆ. ಏನಾಗಿದೆಯೆಂದು ಹೇಳುತ್ತೇವೆ, ನೀವು ಸ್ವಲ್ಪ ಕೇಳಿ, ಆಮೇಲೆ ಮಾತನಾಡಿ.

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ನಂಜುಂಡಪ್ಪ ವರದಿಯ ಸೂಚ್ಯಾಂಕದ ಪ್ರಕಾರವೇ ಹನ್ನೆರಡನೇ ಹಣಕಾಸಿನ ಯೋಜನೆಯಲ್ಲಿ ಹಣ ಬಿಡುಗಡೆ ಮಾಡಿರುವುದರಿಂದ ಇವತ್ತು ಹೊಸಕೋಟೆ ಶಾಸಕರು ನಮ್ಮನ್ನು ಪ್ರಶ್ನೆ ಕೇಳಿದರು ಬೆಂಗಳೂರು ಜಿಲ್ಲೆಯಲ್ಲಿ ಏನಾಗಿದೆಯೆಂಬ ಬಗ್ಗೆ ಅವರ ಗಮನಕ್ಕೆ ತರಲಿಕ್ಕೆ ಇಚ್ಛಿಸುತ್ತೇನೆ. ರಾಮನಗರ ಮುಖ್ಯಮಂತ್ರಿಗಳ ಕ್ಷೇತ್ರ, ಅಲ್ಲಿಗೆ 56.35 ಲಕ್ಷ ರೂ. ಬರುತ್ತದೆ. ಹೊಸಕೋಟೆ ಸನ್ಮಾನ್ಯ ಸದಸ್ಯರು ಕೇಳಿದಂಥ ಕ್ಷೇತ್ರ ಅಲ್ಲಿಗೆ 55.10 ಲಕ್ಷ ರೂ ಬರುತ್ತದೆ. ಇದರ ಪ್ರಕಾರ ನಾವು ನಂಜುಂಡಪ್ಪ ವರದಿಯ ಆಧಾರದ ಮೇಲೆ 12ನೇ ಹಣಕಾಸಿನ ಯೋಜನೆಯನ್ನು ಮಾಡಿದ್ದೇವೋ ಅಥವಾ ನಮ್ಮ ಇಚ್ಛೆಗೆ ಬಂದಂತೆ ಮಾಡಿದ್ದೇವೆಯೇ? ಶಿವರಾಮು ಅವರೇ, ನೀವು ಅದರ ಬಗ್ಗೆ ಮಾತನಾಡಬೇಕೆಂದು ಇಷ್ಟಪಟ್ಟರೆ ನೀವೇನು ತಪ್ಪು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ, ಅದರ ಬಗ್ಗೆ ನೀವು ಚರ್ಚೆ ಮಾಡಬೇಕೆಂದು ನೀವು ಇಷ್ಟಪಟ್ಟರೆ ನಬಾರ್ಡ್‌ನಲ್ಲಿ ಏನು ಮಾಡಿದ್ದೀರಿ? ಇರಿಗೇಷನ್‌ನಲ್ಲಿ ಏನು ಮಾಡಿದ್ದೀರಿ? ನೀವು ಕೊಡಬೇಕಾದಂಥ 5.00 ಕೋಟಿ ರೂ.ಗಳನ್ನು ಗುಲ್ಬರ್ಗಾ ಜಿಲ್ಲೆಗೆ ಕೊಡಬೇಕಾದಾಗ ಯಾವ

ಮಾನದಂಡವನ್ನು ಅನುಸರಿಸಿದ್ದೀರಿ? ಆಮೇಲೆ ಗುಳೇದಗುಡ್ಡಕ್ಕೆ 15.00 ಲಕ್ಷ ರೂ.ಗಳನ್ನು ಕೊಡಬೇಕಾದಾಗ ಏನು ಮಾಡಿದಿರಿ? ಇಂಥದ್ದನ್ನೆಲ್ಲಾ ಚರ್ಚೆ ಮಾಡಬೇಕಾಗುತ್ತದೆ, ಹಾಗಾಗಿ ಅನಾವಶ್ಯಕವಾಗಿ ಇದರ ಬಗ್ಗೆ ಚರ್ಚೆಗೆ ಹೋಗುವುದು ಬೇಡ.

(ಅಡಚಣೆ)

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ: ಅವತ್ತಿನ ಸರ್ಕಾರದಲ್ಲಿ ನ್ಯಾಯ ಸಿಕ್ಕಿರಲಿಲ್ಲ ಎಂದು ಜಗಳ ಮಾಡಿದ್ದರು. ಇವತ್ತು ಇಲ್ಲಿ ಮಾತನಾಡುತ್ತಿದ್ದಾರೆ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ): ನೀವು ಮಂತ್ರಿಗಳಾಗಿದ್ದೀರಿ, ನಿಮಗೆ ಮಾತನಾಡಲಿಕ್ಕೆ ಹಕ್ಕಿಲ್ಲ.

ಅಧ್ಯಕ್ಷರು: ನಾಡಗೌಡರೇ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ: ಆವತ್ತು ನಿಮ್ಮ ಸರ್ಕಾರದಲ್ಲಿ ಏನು ತಾರತಮ್ಯ ಮಾಡಿದ್ದೀರಿ ಎಂಬುದು ನಮಗೂ ಗೊತ್ತಿದೆ.

(ಅಡಚಣೆ)

ಅಧ್ಯಕ್ಷರು: ಬಯ್ಯಾಪುರರವರೇ, ದಯಮಾಡಿ ಕುಳಿತುಕೊಳ್ಳಿ. ಈಗ ಖಚಿತವಾದ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇಲ್ಲಿಗೆ ಈ ಚರ್ಚೆಯನ್ನು ಮುಕ್ತಾಯ ಮಾಡಿ ಬೇಡಿಕೆಯ ಮೇಲೆ ಚರ್ಚೆ.

ಶ್ರೀ ಬಿ.ಆರ್. ಪಾಟೀಲ್: ಅಧ್ಯಕ್ಷರೆ, ಇಲ್ಲಿ ನಮಗೆ ಒಂದು ಅನುಮಾನವಿದೆ. ಮಾನ್ಯ ಮುಖ್ಯಮಂತ್ರಿಗಳ ಹಾಗೂ ಮಾನ್ಯ ಉಪಮುಖ್ಯಮಂತ್ರಿಗಳ ಮಾತನ್ನು ಸಂಪೂರ್ಣವಾಗಿ ನಾವು ಒಪ್ಪುತ್ತೇವೆ. ಅವರು ಸದನದಲ್ಲಿ ಕೊಟ್ಟಂತಹ ಮಾತನ್ನು ನಡೆಸಿಕೊಡುತ್ತಾರೆಂದು ನಾವು ಒಪ್ಪುತ್ತೇವೆ. ಆದರೆ ಮುಖ್ಯಮಂತ್ರಿಗಳು ಬಂದ ಮೇಲೆ ಮಾಡುತ್ತೇವೆಂದು ಹೇಳಿದ್ದಕ್ಕೆ ನಮಗೆ ಅನುಮಾನ ಬರುತ್ತಿದೆ. ಇವರಿಗೆ ಮುಖ್ಯಮಂತ್ರಿಗಳು ಅಡ್ಡಿಬರುತ್ತಿದ್ದಾರೋ, ಅಥವಾ ಉಪಮುಖ್ಯಮಂತ್ರಿಗಳು ಏನಾದರೂ ಮಾಡಿದರೆ ಮುಖ್ಯಮಂತ್ರಿಗಳು ತಪ್ಪು ತಿಳಿದುಕೊಳ್ಳುತ್ತಾರೋ?

(ಅಡಚಣೆ)

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ: ಮುಖ್ಯಮಂತ್ರಿಗಳಿಗೆ ಉಪಮುಖ್ಯಮಂತ್ರಿಗಳಿಗೂ ಹೊಂದಾಣಿಕೆ ಇದೆಯೇ ಎಂಬ ಬಗ್ಗೆ ಏಕೆ ಮಾತನಾಡುತ್ತೀರಿ?

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ: ಇವರು ಮಾಡಿದಂಥ ಇಂಬ್ಯಾಲೆನ್ಸ್‌ನ್ನು ನಾವು ಈಗ ಸರಿ ಮಾಡಬೇಕಾಗಿದೆ.

ಅಧ್ಯಕ್ಷರು: ಎಲ್ಲರೂ ಆತ್ಮಶೋಧನೆ ಮಾಡಿಕೊಳ್ಳಿ. 1952ರಿಂದ ಇದುವರೆಗೆ ಏನೇನಾಗಿದೆ ಎಂಬುದರ ಬಗ್ಗೆ ಹಂತ ಹಂತವಾಗಿ ಎಲ್ಲರೂ ಸೇರಿ ಸರಿ ಮಾಡಬೇಕು. ಇವರ ಮೇಲೆ ಅವರು, ಅವರ ಮೇಲೆ ಇವರು ಆರೋಪ ಮಾಡಿದರೆ ಆಗುವುದಿಲ್ಲ.

ಅದನ್ನು ಸರಿಪಡಿಸುವುದಕ್ಕೆ ಎಲ್ಲರೂ ಕುಳಿತುಕೊಂಡು ಸರಿ ಮಾಡಿ. ಈಗ ಮಾನ್ಯ ಮಾಧುಸ್ವಾಮಿಯವರು ಬೇಡಿಕೆಗಳ ಮೇಲೆ ಮಾತನಾಡುತ್ತಾರೆ. ಬಹಳ ಜನ ಮಾತನಾಡುವವರು ಇರುವುದರಿಂದ ನಾನು ಮಾಧ್ಯಸ್ವಾಮಿಯವರಿಗೆ ಭಿನ್ನಹ ಮಾಡಿಕೊಳ್ಳುವುದೇನೆಂದರೆ ಆದಷ್ಟ ಬೇಗೆ ಮುಗಿಸಬೇಕು ಎಂದು.

ಶ್ರೀ ಜೆ.ಸಿ. ಮಾಧುಸ್ವಾಮಿ: ನೀವು ರಿಸ್ಟ್ರಿಕ್ಷನ್ ಮಾಡುವುದಾದರೆ ನಾನು ಮಾತನಾಡುವುದೇ ಇಲ್ಲ.

ಅಧ್ಯಕ್ಷರು: ಏಕೆಂದರೆ, ಎಲ್ಲರಿಗೂ ಅವಕಾಶ ಮಾಡಿಕೊಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಅರ್ಧ ಮಾತನಾಡಿ, ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ನೀವು ಶುರುವಿನಲ್ಲೇ ಈ ರೀತಿ ಹೇಳಿದರೆ ನಮಗೆ ಹೇಗೆ ಮೂಡ್ ಬರುತ್ತದೆ?

ಅಧ್ಯಕ್ಷರು: ಅದಷ್ಟು ಬೇಗ ಮುಗಿಸಿ.

ಒಬ್ಬ ಸದಸ್ಯರು: ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಈಗ ಶೂನ್ಯವೇಳೆ ಇಲ್ಲ. ಇನ್ನೊಂದು ದಿವಸ ಕೊಡುತ್ತೇನೆ. ಅದು ಲ್ಯಾಪ್ಸ್ ಆಯಿತು. ಸಭೆ ಅಡ್ಜರ್ನ್ ಮಾಡಿದ ಮೇಲೆ, ಶೂನ್ಯವೇಳೆ ಲ್ಯಾಪ್ಸ್ ಆಯಿತು.

4. 2006–07ನೇ ಸಾಲಿನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ:

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಬೇಡಿಕೆಗೆಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಲು ನನ್ನನ್ನು ಕರೆದಿದ್ದಕ್ಕೆ ನಮಗೆ ಅಭಿನಂದಿಸುತ್ತೇನೆ. ಬಹಳ ಪ್ರಮುಖವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಮೇಲೆ ಮಾತನಾಡಲಿಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಇದರ ಮೇಲೆ ಏಕೆ ಮಾತನಾಡಬೇಕೆಂದರೆ, ನಾವು ಇವತ್ತಿನವರೆಗೂ ಹಳ್ಳಿಯಲ್ಲಿ ಬದುಕಿರುವ ಜನ. ಬಹಳ ವರ್ಷಗಳಿಂದ ಶಾಸನ ಸಭೆಯಲ್ಲಿ ಹೇಳುತ್ತಲೇ ಬಂದಿದ್ದೇವೆ. ಎರಡು ವರ್ಗ ನಿರ್ಮಾಣವಾಗಿ ಬಿಟ್ಟಿದೆ. ಒಂದು ಹಳ್ಳಿಯವರು, ಮತ್ತೊಂದು ಪಟ್ಟಣದವರು ಎಂದು. ನಾವು ಪಟ್ಟಣದವರಷ್ಟು ಸುಖವಾಗಿ ಇರುವುದಕ್ಕೆ ಬಯಸದೇ ಹೋದರೂ ಸಾಮಾನ್ಯವಾದ ಅನುಕೂಲಗಳನ್ನು, ಕನಿಷ್ಟ ಮೂಲಭೂತ ಸೌಲಭ್ಯಗಳನ್ನು ಪಡೆಯುವ ಕಡೆ ಇವತ್ತಿನವರೆಗೂ ನಮಗೆ ಆಗಿಲ್ಲ. ಇದರ ಬಗ್ಗೆ ನಾನು ಯಾರನ್ನೂ ಟೀಕೆ ಮಾಡಲಿಕ್ಕೆ ಆಗಲಿಲ್ಲ. ನಮ್ಮ ಇಡೀ ವ್ಯವಸ್ಥೆ ಎಲ್ಲೋ ಒಂದು ಕಡೆ ಕೆಂದ್ರೀಕೃತ ಆಗಿದೆ. ಸನ್ಮಾನ್ಯ ಮಾಜಿ ಪ್ರಧಾನಿಗಳಾದ ದೇವೇಗೌಡರು ಒಂದು ಪುಸ್ತಕ ಬರೆದಿದ್ದರು. ಕತ್ತಲಲ್ಲಿ ಕರ್ನಾಟಕ ಎಂದು. ಇವತ್ತು ಕೂಡ ಗ್ರಾಮದಲ್ಲಿ 4 ಗಂಟೆಯಿಂದ 5 ಗಂಟೆಯವರೆಗೆ ಮಾತ್ರ ವಿದ್ಯುಚ್ಛಕ್ತಿ ಇದೆ. ಪಟ್ಟಣಗಳಲ್ಲಿ 24 ಗಂಟೆಯೂ ವಿದ್ಯುಚ್ಛಕ್ತಿ ಇದೆ. ಆ ವಿದ್ಯುಚ್ಛಕ್ತಿಯನ್ನು ಹಳ್ಳಿಯವರಿಗೂ